
ಡಿಸೆಂಬರ್: 2013 ಬೆಲೆ-20/-

ಕಲ್ಯಾಣ ಕಿರಣ



ಶ್ರೀ ನಿಜಗುಣ ಶಿವಯೋಗಿಗಳು



ಬೀದರಿನ ಹಾರೂರಗೇರಿಯ ಬಸವ ಸಮಿತಿಯಿಂದ ಪೂಜ್ಯ ಮಾತಾಜಿಗೆ ಸತ್ಕಾರ. ಅಧ್ಯಕ್ಷ ಬಸವರಾಜ ಪಾಟೀಲ್, ಚನ್ನಬಸವ ಹಂಗರಗಿ , ಅಶೋಕ ಕೋಡಗೆ, ಮತ್ತು ಶಾಂತಾದೇವಿ ಜೀರಾದಾರ ಚಿತ್ರದಲ್ಲಿದ್ದಾರೆ



ಧಾರವಾಡ ರಾಷ್ಟ್ರೀಯ ಬಸವ ದಳದಿಂದ ಲಿಂಗಾಯತ ಧರ್ಮದ ಮಾನ್ಯತೆಗಾಗಿ ಜಿಲ್ಲಾಧಿಕಾರಿಗಳಿಗೆ ಮನವಿ ಸಮರ್ಪಣೆ
ನೇತೃತ್ವ: ಪೂಜ್ಯ ಮಾತೆ ಗಂಗಾದೇವಿ ಮತ್ತು ಪೂಜ್ಯ ಚನ್ನಬಸವಾನಂದ ಸ್ವಾಮಿಗಳು



ಬೀದರಿನ ಅಣದೂರಿನಲ್ಲಿ ಕ್ರೈಸ್ತರ ಸಮಾರಂಭವೊಂದರಲ್ಲಿ ಬಸವ ಧರ್ಮ ಪೀಠದ ಪೂಜ್ಯ ಶ್ರೀ ಬಸವ ಪ್ರಭುಸ್ವಾಮಿಗಳಿಗೆ ಸನ್ಮಾನ

ಬಸವಾತ್ಮಜೆಯ ಕರೆ

ಬಾ ಬಾ ಬಾ ಎಲೆ ಶರಣ ನೀನು......
ಶರಣ ಮೇಳಕೆ ಬಂದು ಪಾವನನಾಗು ॥ ಪ ॥

ವಿಶ್ವಗುರು ಬಸವಣ್ಣ ಕೊಟ್ಟಿರುವ ಧರ್ಮದ
ಸೋದರತೆ ಬಿಂಬಿಸಲು ಬಾ ಧರ್ಮ ಬಂಧು ॥ ಅ.ಪ.॥

ಅಂದು ಆದಿಯಲಿ ಧರ್ಮಗುರು ಬಸವಣ್ಣ
ಚಂದಾದ ಮಹಾಮನೆಯ ಕಟ್ಟಿ ಕರೆದರು ತಾವು
ಅನುಭವ ಮಂಟಪದ ಆನಂದ ತೊಟ್ಟಿಲಲಿ
ತತ್ವ ಜೋಗುಳ ಹಾಡಿ ಶರಣ ಶಿಶುಗಳ ತೂಗಿ ॥ 1 ॥

ನಾಡ ಬಲ್ಲಿದರೆಲ್ಲ ಕೂಡಿದರು ಹುರುಪಿನಲಿ
ಸೂಡ ಕಟ್ಟಿದರು ಶಿವ ನುಡಿಯ
ದೇವ ಮಹಿಮೆಯ ಸಾರಿ ಮನುಜ ಘನತೆಯ ತೋರಿ
ವಚನ ಧರ್ಮದ ಸಿರಿಯು ಸಂಭ್ರಮಿಸಿತಲ್ಲಿ ॥ 2 ॥

ಸಮತೆಯ ಸಾರಲಿಕೆ ಆಯಿತೊಂದು ಕ್ರಾಂತಿ
ಧರ್ಮಪಿತ ಬಸವಗುರು ಗಡಿಪಾರು ಪಡೆದಿಹರು
ಹರಳಯ್ಯ ಮಧುವಯ್ಯ ಪ್ರಾಣವನು ತೆತ್ತಿಹರು
ಮಾಚಯ್ಯ ಚೆನ್ನಣ್ಣ ನಾಗಲೆಯು ಕಾದಿಹರು ॥ 3 ॥

ಶರಣರ ಕರುಳಿನ ಕರೆಯು ತಾ ಕೇಳಿಸದೆ?
ನಿನ್ನ ಋಣ ತೀರಿಸುವ ಛಲವು ತಾ ಮೊಳೆಯದೆ?
ವಚನ ವಾಙ್ಮಯವನ್ನು ನಮಗಾಗಿ ರಕ್ಷಿಸಲು
ಬಲಿದಾನ ಗೈದವರ ಮಹಾತ್ಯಾಗ ಅರಿಯೆಯಾ? ॥ 4 ॥

ಕೂಡಲ ಸಂಗಮವು ಧರ್ಮಕ್ಷೇತ್ರವು ಎಂದು
ಶರಣ ವ್ರತ ಸ್ವೀಕರಿಸಿ ಶರಣ ಮೇಳಕೆ ಬಂದು
ಗಣಲಿಂಗ ದರ್ಶನವ ಪಡೆದು ಪುಳಕಿತನಾಗು
ಸಮುದಾಯ ಪ್ರಾರ್ಥನೆಯ ಮಾಡಿ ಧನ್ಯನಾಗು ॥ 5 ॥

ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ
ಎಂಬ ತತ್ತ್ವವ ತಿಳಿದು ವಿಶ್ವಧರ್ಮಿಯೆ ಆಗು
ಬಸವ ಕಿರಣವೆ ಆಗಿ ತತ್ವವನು ಪಸರಿಸು
ಸಚ್ಚಿದಾನಂದ ಪ್ರಿಯೆ ಮಾತೆಯಾ ಕರೆಯಿದು ॥ 6 ॥

ಭಕ್ತನು ಭಕ್ತನ ಮನೆಗೆ ಬಂದಡೆ, ಭೃತ್ಯಾಚಾರವ ಮಾಡಬೇಕು;
ಕರ್ತನಾಗಿ ಕಾಲ ತೊಳೆಯಿಸಿಕೊಂಡಡೆ, ಹಿಂದೆ ಮಾಡಿದ ಭಕ್ತಿಗೆ ಹಾನಿ!
ಲಕ್ಷಗಾವುದ ದಾರಿಯ ಹೋಗಿ, ಭಕ್ತನು ಭಕ್ತನ ಕಾಂಬುದು ಸದಾಚಾರ.
ಅಲ್ಲಿ ಕೂಡಿ ದಾಸೋಹವ ಮಾಡಿದೊಡೆ
ಕೂಡಿಕೊಂಬನು ನಮ್ಮ ಲಿಂಗದೇವನು.

ಸಂಪುಟ-44 ಸಂಚಿಕೆ-12 | ಬಸವ ಶಕೆ -880 ಡಿಸೆಂಬರ್-2013 | ಪಂಚ ವಾರ್ಷಿಕ ಸದಸ್ಯತ್ವ 1000 ರೂ. ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

ಲೇಖನಗಳು	ಲೇಖಕರು	ಪುಟ

ಶರಣ ವ್ರತ ಸ್ವೀಕಾರ

ಶರಣ ಬಂಧುಗಳೇ,

ಶರಣ ವ್ರತ ಸ್ವೀಕಾರ ಮಾಡಿ ಶರಣ ಮೇಳಕ್ಕೆ ಅನೇಕರು ಬರುವುದುಂಟು. 40 ದಿವಸಗಳ ಗುರುಸಾರಾಯ ಸಂಪದ್ ವ್ರತ, 30 ದಿನಗಳ ಲಿಂಗ ಸಾರಾಯ ಸಂಪದ್ ವ್ರತ, 20 ದಿವಸಗಳ ಜಂಗಮ ಸಾರಾಯ ಸಂಪದ್ ವ್ರತ, 10 ದಿವಸಗಳ ಪ್ರಸಾದ ಸಾರಾಯ ಸಂಪದ್ ವ್ರತ. ಇವುಗಳಲ್ಲಿ ಯಾವುದನ್ನಾದರೂ ಸ್ವೀಕರಿಸಿ ದಿ. 14-01-2014ರಂದು ವ್ರತವನ್ನು ಪೂರ್ಣ ಗೊಳಿಸಬೇಕು.

1. ಗುರು ಸಾರಾಯ ಸಂಪದ್ ವ್ರತ - ಡಿಸೆಂಬರ್ 2ರಂದು
2. ಲಿಂಗ ಸಾರಾಯ ಸಂಪದ್ ವ್ರತ - ಡಿಸೆಂಬರ್ 12ರಂದು
3. ಜಂಗಮ ಸಾರಾಯ ಸಂಪದ್ ವ್ರತ - ಡಿಸೆಂಬರ್ 22ರಂದು
4. ಪ್ರಸಾದ ಸಾರಾಯ ಸಂಪದ್ ವ್ರತ - ಜನವರಿ 1ರಂದು

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-560010. Phone : 080-23131476, Send SMS to 9945806297/ 9738028585/ 8892912123
Email :- kalyanakirana1970@gmail.com



ಕೂಡಲ ಸಂಗಮ ಸುಕ್ಷೇತ್ರದಲ್ಲಿ
ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ

ಇಪ್ಪತ್ತೇಳನೆಯ ಶರಣ ಮೇಳ

2014ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ(ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಇಪ್ಪತ್ತೇಳನೆಯ ಶರಣ ಮೇಳವು 2014ರ ಜನವರಿ 11, 12, 13, 14ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗ ಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. ಐದು ದಿನ ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯ ವಿಧಿಯಾಗಿರುತ್ತದೆ. ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತಿದೆ.ದಿ. 11 ಮತ್ತು 12 ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಯಾರು ಬೇಕಾದರೂ ಚಿಂತನ ಗೋಷ್ಠಿಯಲ್ಲಿ ಪಾಲ್ಗೊಳ್ಳಬಹುದು.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ ದಿ.10ನೆಯ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 10,000 ರೂ. ಮತ್ತು ಮೇಲೆ ಕೊಟ್ಟವರು 4. ಹಿತೈಷಿಗಳು :3000 ರೂ.
2. ಪೋಷಕರು : 8000 ರೂ. ಮತ್ತು ಮೇಲೆ ಕೊಟ್ಟವರು. 5. ಸ್ವಾಗತ ಸಮಿತಿ ಸದಸ್ಯತ್ವ: 1500 ರೂ.
3. ದಾನಿಗಳು: 5000 ರೂ. ಮತ್ತು ಮೇಲೆ ಕೊಟ್ಟವರು. 6. ಪ್ರತಿನಿಧಿ ಶುಲ್ಕ : 500 ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 10,000/20,000 ರೂಪಾಯಿಗಳ ಪುದುವಟ್ಟು (F.D)ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ"ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of India, Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ. ಯನ್ನಾಗಲಿ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧ ಗಯೆ ಧರ್ಮ ಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನಡೆಯುವ)ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೂಡಲ ಸಂಗಮ, ಬ್ಯಾಂಕ್ ಖಾತೆಗಳು

Sharana Mela Utsava Samithi, SB A/c 10818354899
Basava Dharma Peetha, SB A/c No. 10818354684
Basava Mahamane Charitable Trust SB A/c 32391821105

Sharana Mela Utsava Samithi, (Canara Bank, Bangalore) SB A/c 1145101024057 ಕಾಣಿಕೆ ಕಳಿಸುವವರು ನೇರವಾಗಿ ವರ್ಗಾಯಿಸಿದರೆ ಕಾರ್ಯಾಲಯಕ್ಕೆ ತಿಳಿಸಬೇಕು. 80ಜಿ ಇನ್‌ಕಮ್‌ಟ್ಯಾಕ್ಸ್ ರಿಯಾಯಿತಿ ಬೇಕೆನ್ನುವವರು ಕಾರ್ಯಾಲಯಕ್ಕೆ ಸಂಪರ್ಕಿಸಿ.

ಸಂಪರ್ಕಿಸುವ ವಿಳಾಸಗಳು

ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ದೂ : 080-22923736/23131476

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟ
ದೂ : 9448046554/9880768555

ಸಂಪಾದಕೀಯ :

"ಲಿಂಗದೇವ" ಪದ ಪ್ರಯೋಗ ಕುರಿತು

ಇಸ್ಲಾಂ ಧರ್ಮೀಯರು ಕೆಲವೊಂದು ವಿಷಯಗಳಿಗೆ ಬಹಳ ಮಹತ್ವಕೊಡುತ್ತಾರೆ. ಪ್ರವಾದಿ ಮೊಹಮ್ಮದರ ಹೆಸರು ಉಚ್ಚರಿಸುವಾಗ, ಅಲ್ಲಹ, ಕುರಾನ್ ಕುರಿತು ಪೂರ್ಣ ಗೌರವ ನೀಡುತ್ತಾರೆ. ಅವಕ್ಕೆ ಅಪಚಾರವಾಗದಂತೆ ನೋಡಿಕೊಳ್ಳುತ್ತಾರೆ. ನಮ್ಮಲ್ಲಿ ಅನೇಕ ಸಾಹಿತಿಗಳು, ಬರಹಗಾರರು (ಡಾ||ಚಿ.ಮೂಯವರೂ ಸೇರಿದಂತೆ) ಗುರು ಬಸವಣ್ಣನವರ ಬಗ್ಗೆ, ಇತರ ಶರಣರ ಬಗ್ಗೆ ಏಕವಚನದಲ್ಲಿ ಲೇಖನಗಳನ್ನು ಬರೆಯುವುದುಂಟು, ಭಾಷಣ ಮಾಡುವುದುಂಟು. ಹೀಗೇಕೆ ಏಕವಚನದಲ್ಲಿ ಮಾತನಾಡುವಿರಿ ಎಂದು ಕೇಳಿದರೆ, "ಬಹಳ ಆತ್ಮೀಯರ ಜೊತೆಗೆ ಏಕವಚನದಲ್ಲಿ ಮಾತನಾಡುವುದಿಲ್ಲವೇ? ಹಾಗೆ" (ಡಾ|| ಎಂ.ಎಂ. ಕಲಬುರ್ಗಿ, ಬೀದರದಲ್ಲಿ). ಏಕವಚನ ಆತ್ಮೀಯತೆಯ ದ್ಯೋತಕ ಎಂದು ಹೇಳುವರು. ಆತ್ಮೀಯತೆ ಎಂದು ಈ ಮಹನೀಯರನ್ನು ಕಾರ್ಯಕ್ರಮದಲ್ಲಿ ಸ್ವಾಗತ ಮಾಡುವಾಗ ಬಂದಿದ್ದಾನೆ, ಕುಳಿತಿದ್ದಾನೆ ಎಂದು ಕಾರ್ಯಕ್ರಮ ನಿರ್ವಾಹಕರು ನುಡಿದರೆ ಇವರಿಗೆ ಸಂತೋಷವೆನಿಸುವುದೆ? ಇವರಿಗಿಂತಲೂ ಧರ್ಮಪಿತ ಗುರು ಬಸವಣ್ಣನವರು ಕನಿಷ್ಠರೆ? ಸಿಖ್ ಧರ್ಮಸ್ಥಾಪಕರಾದ ನಾನಕರ ಜೊತೆ ಗುರು ಪದ ಅವಿನಾಭಾವದಿಂದ ಜೋಡಿಸಲ್ಪಟ್ಟಿದೆ. ಹೀಗಾಗಿ ಯಾರೇ ಆಗಲಿ ಉಚ್ಚರಿಸುವಾಗ ಗುರು ನಾನಕ ಎಂದು, ಮೊಹಮ್ಮದರ ಜೊತೆಗೆ ಪ್ರವಾದಿ ಪದ ಜೋಡಿಸಿ ಮಾತನಾಡುವರು, ಹಾಗೆ ನಾವು ಬರೆಯುವಾಗ, ಭಾಷಣ ಮಾಡುವಾಗ ಗುರು ಬಸವಣ್ಣನವರು ಎನ್ನಬೇಕು. ಇಲ್ಲವೇ ಧರ್ಮಗುರು, ಧರ್ಮಪಿತ ಮುಂತಾಗಿ ಸೇರಿಸಬೇಕು.

ವೀರಶೈವವಾದಿ ಪಂಚಾಚಾರ್ಯ ಗುಂಪಿನ ಒಬ್ಬರು ಒಂದು ಕೆಟ್ಟ ಪತ್ರ ಬರೆದಿದ್ದರು. (ಅವರು ಕಲ್ಯಾಣಕಿರಣ ಓದುವ ಸಹನೆ ಹೊಂದಿರುವುದು ಆಶ್ಚರ್ಯಕರ) ಅಡ್ಡಪಲ್ಲಕ್ಕಿ ಬಗ್ಗೆ ನಾವು ಟಿ.ವಿ.ಗಳಲ್ಲಿ ವಿಮರ್ಶೆ ಮಾಡಿದ್ದು ಕೋಪ ತರಿಸಿದೆ. ಅವರು ಲಿಂಗ, ಲಿಂಗದೇವ, ಲಿಂಗಾನಂದ, ತ್ಯಾಗಾಂಗ-ಭೋಗಾಂಗ-ಯೋಗಾಂಗ ಈ ಪದಗಳನ್ನು ಅಸಹ್ಯಾರ್ಥದಲ್ಲಿ ವಿಡಂಬಿಸಿ, ವ್ಯಂಗ್ಯವಾಡಿದ್ದಾರೆ ಇದರಿಂದ ನನಗೆ ದುಃಖವಾಗಲಿಲ್ಲ, ಬೇಸರವೂ ಆಗಲಿಲ್ಲ. ಅವರಿಗೆ ನಮ್ಮ ಧರ್ಮದ ತತ್ವಜ್ಞಾನ ಕುರಿತು ಎಷ್ಟೂ ಜ್ಞಾನವಿಲ್ಲ ಎಂದು ವಿಷಾದವಾಯಿತು.

ಲಿಂಗಾಯತ ಧರ್ಮ ನಿಂತಿರುವುದೇ 'ಲಿಂಗ'ಪದದ ಮೇಲೆ, ಲಿಂಗ ತತ್ವದ ಮೇಲೆ. "ಯಾವುದರಿಂದ ಈ ಸಮಸ್ತ ಸೃಷ್ಟಿ ಎಲ್ಲವೂ ಹೊರಹೊಮ್ಮಿದೆಯೊ, ಎಲ್ಲಿ ಲೀಲೆಯಾಡುತ್ತಿದೆಯೋ ಯಾವುದರಲ್ಲಿ ಅಂತಿಮವಾಗಿ ವಿಲೀನವಾಗುತ್ತದೆಯೋ ಆ ಮಹಾಚೈತನ್ಯವೇ ಲಿಂಗ. ಅದುವೇ ದೇವರು." ಇಂತಹ ದೇವರನ್ನು ಇಷ್ಟಲಿಂಗರೂಪದಲ್ಲಿ ಸಂಬಂಧ - ಆಯತ ಮಾಡಿಕೊಳ್ಳುವವನೇ ಲಿಂಗಾಯತನು. ಒಂದು ಪದಕ್ಕೆ ಹಲವಾರು ಅರ್ಥಗಳು ಇರುತ್ತವೆ. ಲಿಂಗ ಎಂದರೆ ದೇವರು, ಲಿಂಗ ಎಂದರೆ ಕುರುಹು, ಲಿಂಗ ಎಂದರೆ ಜನನೇಂದ್ರಿಯವೂ ಅಹುದು. ಈ ಬಗ್ಗೆ ಗೊತ್ತಿಲ್ಲದ ಬ್ರಿಟಿಷರು ಜನನೇಂದ್ರಿಯದ ಕುರುಹಾದ ಲಿಂಗವನ್ನು ಲಿಂಗಾಯತರು ಕೊರಳಲ್ಲಿ ಧರಿಸುತ್ತಾರೆ ಎಂದು ಬರೆದರು. ಇಷ್ಟಲಿಂಗವನ್ನು ರೂಪಿಸಿದ ಗುರು ಬಸವಣ್ಣನವರು ಇಷ್ಟಲಿಂಗದ ಸ್ವರೂಪ ಕುರಿತು ಹೀಗೆ ಹೇಳುತ್ತಾರೆ:

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ
ಬ್ರಹ್ಮಾಂತದಿಂದತ್ತತ್ತ ನಿಮ್ಮ ಶ್ರೀ ಮುಕುಟ
ಅಪ್ರಮಾಣ, ಅಗಮ್ಯ, ಅಗೋಚರ, ಅಪ್ರತಿಮ ಲಿಂಗವೇ
ಲಿಂಗದೇವಯ್ಯಾ, ನೀವೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ.

ಆದ್ದರಿಂದ ನಾವು ಲಿಂಗ, ಲಿಂಗದೇವ ಪದಗಳನ್ನು ಅತ್ಯಂತ ಭಯಭಕ್ತಿಯಿಂದ ಉಚ್ಚರಿಸಬೇಕು. ಭಾಷಣ ಮಾಡುವಾಗ ಮೊದಲು ಸೃಷ್ಟಿಕರ್ತ ಲಿಂಗದೇವನನ್ನು ಸ್ಮರಿಸಿಕೊಂಡು ನಂತರ ಧರ್ಮಕರ್ತ ಗುರು ಬಸವಣ್ಣನವರನ್ನು ಸ್ಮರಿಸಬೇಕು.

ಪದಾರ್ಥ ತ್ಯಾಗ, ಪ್ರಸಾದ ಭೋಗ, ಲಿಂಗಯೋಗ' ನಮ್ಮ ಧರ್ಮದ ಯೋಗ ಸಾಧನೆಯಲ್ಲಿ ಬರುವ 3 ಹಂತಗಳು. ಇಂದ್ರಿಯಗಳು ವಿಷಯಗಳನ್ನು ತ್ಯಾಗ ಮಾಡಬೇಕು; ಜೀವನದಲ್ಲಿ ಎದುರಾಗುವ ಸುಖ-ದುಃಖ, ನಲಿವು-ನೋವು. ಎರಡನ್ನೂ ದೇವನ ಪ್ರಸಾದವೆಂದು ಸಮಚಿತ್ತದಿಂದ ಸ್ವೀಕರಿಸುವುದೇ ಪ್ರಸಾದ ಭೋಗ. ದೇವನೊಡನೆ ಭಾವ ಸಾಮರಸ್ಯವನ್ನು ಸಾಧಿಸುವುದೇ ಲಿಂಗಯೋಗ. ಈ ಪದಗಳನ್ನು ಕುಚೋದ್ಯ ಭಾವದಿಂದ ವೀರಶೈವವಾದಿಗಳು ಬಳಸುವುದು ತಪ್ಪು

- ಮಾತಾಜಿ

ಬಸವ ವಚನಾಮೃತ

1361.ಜಂಗಮ ಸೇವೆ

ಉದಕದ ಬರವು ವಿಶ್ವಕ್ಕೆ ಹೊಸ ಪರಿ ಎಂಬಂತೆ
ಮಾಟವ ಮಾಡುವೆನು ಜಂಗಮಕ್ಕೆ
ನಿರವಯದ ಸುಳುಹು ನಿಬ್ಬೆರಗಿನ ಬರವಿಂಗೆ.
ಲಿಂಗದೇವ ಕೇಳಯ್ಯಾ,
ಇಂತಲ್ಲದೆ ನಿಮ್ಮ ನಿಜವನರಿಯಬಾರದೆನಗೆ.

ಮಳೆಯ ನಿರಿನ ಧಾರೆ ಜಗತ್ತಿಗೆ ಹೊಸ ಚೈತನ್ಯವನ್ನು ಕೊಡುತ್ತದೆ. ಅದೇ ರೀತಿ ಜಂಗಮ(ಸಮಾಜ)ಕ್ಕೆ ಮಾಡುವ ಸೇವೆ ನನಗೆ ಅಪಾರ ಚೈತನ್ಯ ನೀಡುತ್ತದೆ ಎಂದು ನಾನು ಜಂಗಮ ಸೇವೆ ಮಾಡುವೆ. ಲಿಂಗದೇವರು ನಿರವಯವನು ಅವನ ಸಾಕಾರವೇ ಸಮಾಜ. "ಲಿಂಗದೇವಾ ಕೇಳಯ್ಯ, ಹೀಗಲ್ಲದೆ ಸತ್ಯವನ್ನು ತಿಳಿದುಕೊಳ್ಳಲು ನನಗೆ ಸಾಧ್ಯವಾಗದು."

1362. ಸ್ವಾನುಭವದ ಆನಂದ

ಸ್ಥೂಲತನುವೆಂಬ ಭಾಂಡದಲ್ಲಿ
ಸರ್ವಾಚಾರವೆಂಬ ಸಯದಾನವ ತುಂಬಿದೆ
ತುಂಬಲೊಡನೆ ಅಗ್ನಿಯಿಲ್ಲದ ಮುನ್ನ ಪಾಕವಾಯಿತ್ತು.
ಮೇಲುಸಾಧನವಿಲ್ಲದ ಮುನ್ನ ರುಚಿ ಪಕ್ವವಾಯಿತ್ತು.
ಅದನ್ನು ಸೂಕ್ಷ್ಮ ತನುವೆಂಬ ಭಾಂಡದಲ್ಲಿ ಬರಿಕೆಯ್ದು
ಕಾರಣತನುವಿನಲ್ಲಿ ಕುಳ್ಳಿರ್ದು ಊಡೆಹೆನೆಂದನುಮಾಡಲು
ಪ್ರಕೃತಿಯಳಿದು ಒಂದೆ ಭಾಂಡವಾದುದ ಕಂಡು
ಉಣಲೊಲ್ಲದೆ ಅನ್ಯರಿಗಿಕ್ಕದೆ
ಎನ್ನದೆನ್ನದೆ ಸಯದಾನಂಗಳ ತೆಗೆದುಕೊಳ್ಳದೆ
ಬೀಸರವೋಗದೆ ಒಂದರೊಳಗೊಂದಿತ್ತೆನ್ನದೆ
ಉಂಡು ಸುಖಿಯಾದೆನಯ್ಯಾ, ಲಿಂಗದೇವಾ.

"ಶರೀರ ಮಾದ್ಯಂ ಖಲು ಧರ್ಮ ಸಾಧನಂ" ಎಂದು ಮಹಾಕವಿ ಕಾಳಿದಾಸ ಹೇಳಿದಂತೆ, ಲಿಂಗದೇವರನೊಲಿಸಬಂದ ಪ್ರಸಾದ ಕಾಯ ಎಂದು ಗುರು ಬಸವಣ್ಣನವರು ಮತ್ತೊಂದು ವಚನದಲ್ಲಿ ಹೇಳಿದಂತೆ ಶರೀರದಲ್ಲೇ ಎಲ್ಲ ಸಾಧನೆಯನ್ನು ಮಾಡಬೇಕು.

ಸ್ಥೂಲ ಶರೀರ ಎಂಬುದೇ ಪಾತ್ರೆ; ಇದರಲ್ಲಿ ಸರ್ವಾಚಾರ ಎಂಬ ಸಯದಾನ (ಅಡುಗೆಯ ಸಾಮಗ್ರಿ)ವನ್ನು ತುಂಬಿದೆ. ಜ್ಞಾನದ ಅಗ್ನಿಯನ್ನು ಪೂರೈಸುವ ಮೊದಲೇ ಅಡುಗೆ ಪಾಕವಾಯಿತು. ಮೇಲು ಸಾಧನವಾಗಿ ಬೇರೇನನ್ನೂ ಹಾಕದೆಯೇ ರುಚಿಯು ಪಕ್ವವಾಗಿತ್ತು (ಇದರರ್ಥ ಜ್ಞಾನ ಎಂಬ ಅಗ್ನಿ, ಕ್ರಿಯೆ ಎಂಬ ಮೇಲು ಸಾಧನವಿಲ್ಲದೆ, ಸರ್ವಾಚಾರದಿಂದ ಎಲ್ಲವನ್ನೂ ಸಾಧಿಸಬಹುದು ಎಂಬುದಾಗಿದೆ) ಸ್ಥೂಲ ತನುವಿನಿಂದ ಸೂಕ್ಷ್ಮ ತನುವಿಗೆ ಏರಿ ಅಲ್ಲಿಂದ ಮುಂದೆ ಕಾರಣ ತನುವಿಗೆ ಸಾಗಿ ಲಿಂಗದೇವನಿಗೆ

ಉಣ್ಣಿಸುವೆನೆಂದು ಅಣಿ ಮಾಡಿದಾಗ ಸ್ಥೂಲ-ಸೂಕ್ಷ್ಮ-ಕಾರಣ ಎಂಬ ಮೂರು ಶರೀರದ ಪ್ರಕೃತಿಯಳಿದು ಒಂದೇ ಭಾಂಡವಾಯಿತು.

ಉಣ್ಣುವ ಪ್ರಜ್ಞೆಯೂ ಇಲ್ಲವಾಯಿತು. ಅನ್ಯರಿಗೆ ವಿವರಿಸಿ ಹೇಳುವ ಆಕಾಂಕ್ಷೆಯೂ ಹೋಯಿತು. ಈ ಅನುಭವ ನನ್ನದು ಎನ್ನುವ ಅರಿವು ಇಲ್ಲವಾಯಿತು. ಮನಸ್ಸು ವಿಚಲಿತ ವಾಗದೆ ಉಂಡು ಸುಖಿಯಾದೆನಯ್ಯ ಲಿಂಗದೇವ.

1363. ಶರಣರ ಪೂಜೆಯ ವಿಶೇಷ

ಸಕಲರ ತೃಪ್ತಿಯಂತಲ್ಲ ಶಿವಶರಣರ ತೃಪ್ತಿಯು
ಸಕಲರ ಪೂಜೆಯಂತಲ್ಲ ಹರಶರಣರ ಪೂಜೆಯು
ತೃಪ್ತಿಯಲ್ಲಿ ಸಂಹಾರಪ್ರಣವಗಳನನುಗೊಳಿಸುವರು;
ಪೂಜೆಯಲ್ಲಿ ಅಮೃತಪ್ರಣವವ ಸೂಸಿ ಬೆರಗಪ್ಪರು.
ಇದರಂದವ ಶ್ರೀಗುರು ಲಿಂಗದೇವರು ಬಲ್ಲರು, ಸಿದ್ಧರಾಮಯ್ಯಾ.

ಶರಣರು ಲೌಕಿಕ ಜನರಂತೆ ಧನಕನಕ ಭೋಗಭಾಗ್ಯಗಳಿಂದ ತೃಪ್ತರಾದವರಲ್ಲ ಅವರು ಆಚಾರ-ಅರಿವು-ಅನುಭಾವದ ಜನರನ್ನು ಕಂಡಾಗ ಹರ್ಷಿಸುವರು. ಸಾಮಾನ್ಯ ಜನರು ಮಾಡುವ ಪೂಜೆಯಂತೆ ಅವರು ಪೂಜೆ ಮಾಡುವುದಿಲ್ಲ. ಅವರ ಪೂಜೆ ಸಾಧನಾತ್ಮಕವಾಗಿ ಇರುವುದು. ತೃಪ್ತಿಯಲ್ಲಿ ಸಂಹಾರಪ್ರಣವವಾದ "ನಮಃಶಿವಾಯ" ಪಠಿಸುವರು. ಪೂಜೆಯಲ್ಲಿ ಓಂಕಾರನಾದದ ಅಮೃತ ಪ್ರಣವವ ಅನಾಹತ ಚಕ್ರದಲ್ಲಿ ಧ್ವನಿಸುತ್ತ ಆನಂದಿಸುವರು. ಈ ಪೂಜೆಯ ಆನಂದವನ್ನು ಪರಮಗುರುವಾದ ಲಿಂಗ ದೇವನೇ ಬಲ್ಲನು ಸಿದ್ಧರಾಮಯ್ಯ.

1364. ದಿವ್ಯಾನುಭವ

ನೀಲದ ಮಣಿಯೊಂದು ಮಾಣಿಕ್ಯವ ನುಂಗಿದಡೆ,
ವಜ್ರ ಬಂದು ಅದು ಬೇಡವೆಂದುಗುಳಿಸಿತ್ತು ನೋಡಾ
ಅಡಗಿದ ಮಾಣಿಕ್ಯ ನೀಲದ ತಲೆಯ ಮೆಟ್ಟಿ
ಆನಂದನಾಟ್ಯವನ್ನಾಡುತ್ತಿದ್ದಿತ್ತು.
ಅಂಬರದೊಳಗಣ ಮುಗ್ಧೆ ಕಂಗಳ ಮುತ್ತಿನ ಮಣಿಯ
ಮಥನವಿಲ್ಲದೆ ನುಂಗಿ ಉಗುಳುತ್ತಿದ್ದಳು.
ಲಿಂಗ ಜಂಗಮವೆಂಬುದ ಇಂದರಿದು ಸುಖಿಯಾದೆನು,
ಲಿಂಗದೇವರಲ್ಲಿ.

ನೀಲದ ಮಣಿ ಎಂದರೆ ಅನಾಹತ ಚಕ್ರ; ಮಾಣಿಕ್ಯವೆಂದರೆ ದಿವ್ಯಾನುಭವ. ನೀಲದ ಮಣಿ ಮಾಣಿಕ್ಯವನ್ನು ನುಂಗುವುದೆಂದರೆ ಅನಾಹತ ಚಕ್ರವು ಜಾಗೃತಗೊಂಡು ದಿವ್ಯಾನುಭವ ಎಂಬ ಮಾಣಿಕ್ಯವನ್ನು ನುಂಗಿ ಆನಂದಿಸುತ್ತಿದ್ದಿತು. ಆಗ ಕೆಳಗಿನಿಂದ ಏರಿ ಬಂದ ಕುಂಡಲಿನಿ ಶಕ್ತಿ ಎಂಬ ವಜ್ರ ಅದಕ್ಕೆ ತಡೆಹಾಕಿ, ಇನ್ನೂ ಮೇಲೇರಿತು. ಆ ದಿವ್ಯಾನುಭವದ ಮಾಣಿಕ್ಯ ಅನಾಹತ ಚಕ್ರವನ್ನು ಮೆಟ್ಟಿ, ಮೇಲೇರಿ ಆನಂದನಾಟ್ಯವನ್ನು ಆಡುತ್ತಿತ್ತು. ಅಂಬರದೊಳಗಣ ಮುಗ್ಧೆ ಎಂದರೆ ಸಹಸ್ರಾರು ಚಕ್ರದ ಒಳಗಿರುವ ಚಿದಾಕಾಶದಲ್ಲಿ ಇರುವ ದಿವ್ಯಾನುಭವವು ಕಂಗಳಿನ ಮೂಲಕ ಹೊರಸೂಸುತ್ತ, ಇಷ್ಟಲಿಂಗ ದರ್ಪಣದಲ್ಲಿ ಲೀನವಾಗುತ್ತಲಿರುವಾಗ, ಕಣ್ಣುಗಳಲ್ಲಿ ಕಾಂತಿಯು ಚಿಮ್ಮುತ್ತಿತ್ತು. ಈ ಅನುಭವವಾದಾಗ ಲಿಂಗದೇವನ ಸ್ವರೂಪ ಅನುಭವಕ್ಕೆ ಬಂದಿತು.

ಇಂತಹ ಅನುಭವವನ್ನು ಪಡೆದವನೇ ಜಂಗಮ ಎಂಬುದನ್ನು ಇಂದು ಅರಿದು ಸುಖಿಯಾದ.

1365. ಯೋಗ ಸಾಧನೆ

ನೀರ ಒರಳ ಮಾಡಿ, ನೆರಳ ಒನಕೆ ಮಾಡಿ
ಆಕಾರವಿಲ್ಲದಕ್ಕಿಯ ಥಳಿಸುತ್ತಿರಲು
ಮೇರುಗಿರಿಯಾಕಳ ಕರೆದ ಕ್ಷೀರದಲ್ಲಿ ಅಡಿಗೆಯ ಮಾಡಿ
ನಾರಿಯ ಬಸುರೊಳಗೆ ಗಂಡ ಬಂದು ಕುಳ್ಳಿರಲು
ಮಾಡಿದಡಿಗೆಯ ಮನವುಂಡು ಹೋಗಲು,
ಮೇಲು ಕೈ ತಲೆ ಹಿಡಿದು ಸಂತೋಷದಿಂದ
ಪ್ರಾಣಸಖಿ ತನ್ನ ಗಂಡಂಗೆ ನೀಡುತ್ತಿರಲು
ಅರಳ ಹುಟ್ಟಿಗೆಯಲ್ಲಿ ಹೊರಳಿಕೂಡುವ ಭೇದ,
ಮರಳಿ ಕೂಡಲಿಕೆಂತುಂಪಣವಿಲ್ಲ.
ಕೆರಳಿ ಮುನಿದು ಘುಡುಘುಡಿಸಿ ಗರ್ಜಿಸಲೊಡನೆ
ತೆರಳಲಮ್ಮದೆ ಅಂಜಿ ಒಳಗಡಗಿದ
ಶರಣಸತಿ ಲಿಂಗಪತಿಯೆಂಬ ಭಾಷೆ
ನೀನು ಹರನ ಬಟ್ಟೆಯ ನೋಡಿ ಸುಯ್ಯಬೇಡ,
ಜನನ ಮರಣವಿರಹಿತ ಲಿಂಗದೇವನ ಅನುಭಾವದ
ಶ್ರೀಪಾದದೊಳಗಿದ್ದು ಸುಖಿಯಾದೆನು.

ಗುಹ್ಯೇಂದ್ರಿಯವನ್ನು ಆಧಾರವಾಗಿ ಮಾಡಿಕೊಂಡು ನೆರಳು ಅಂದರೆ ಪ್ರಾಣವಾಯುವನ್ನು ಮೇಲಿನಿಂದ ಕೆಳಗೆ, ಕೆಳಗಿನಿಂದ ಮೇಲೆ ಇಳಿಸುತ್ತ ಏರಿಸುತ್ತ ಒನಕೆಯಂತೆ ಕುಟ್ಟುತ್ತಿರಲು, ಭೂಮಿಯ ಮೇಳೆ ಅತಿ ಎತ್ತರವಾದ ಬೆಟ್ಟವಾಗಿ ಇರುವ ಮೇರುಗಿರಿ ಯಂತೆ ದೇಹದಲ್ಲಿ ಮೇಲಿರುವ ಸಹಸ್ರಾರು ಚಕ್ರದಿಂದ ಸುರಿವ ಅಮೃತಧಾರೆಯಲ್ಲಿ ಅಡಿಗೆಯಾಗುವುದು. ನಾರಿಯ ಬಸುರೊಳಗೆ ಅಂದರೆ ಶರಣ ಸತಿಯ ಹೃದಯದಲ್ಲಿ ಲಿಂಗಪತಿ ಬಂದು ಕುಳ್ಳಿರಲು, ಮಾಡಿದಡಿಗೆಯ ಅಂದರೆ ದಿವ್ಯಾನುಭವವನ್ನು ಸಂತೋಷ ದಿಂದ ಉಣ್ಣಲು, ಆಜ್ಞಾ(ಕೈ), ಸಹಸ್ರಾರು ಎಂಬ (ತಲೆ) ಚಕ್ರಗಳಲ್ಲಿ ಸಾಧನೆ ಮಾಡುತ್ತ ಪ್ರಾಣವೆಂಬ ಹೆಂಡತಿ ಲಿಂಗಪತಿಗೆ ನೀಡುವಳು. ಸಹಸ್ರಾರ ಎಂಬ ಅರಳ ಹುಟ್ಟಿಗೆಯಲ್ಲಿ ಜೀವಾತ್ಮ-ಪರಮಾತ್ಮರಿಬ್ಬರ ಕೂಟ, ಸಂಯೋಗವಾಗುತ್ತಿದೆ. ಸಹಸ್ರಾರು ಚಕ್ರವು ಜಾಗೃತ ಗೊಂಡು ಗುಡುಗು-ಮಿಂಚು-ಸಿಡಲಿನಂತಹ ಅನುಭವವನ್ನು ನೀಡುವುದು. ಶರಣ ಸತಿ-ಲಿಂಗಪತಿ ಭಾವವು ಮತ್ತಷ್ಟು ಗಟ್ಟಿಗೊಳ್ಳುವುದು. ಅಲ್ಲಿ ಇನ್ನು ಯಾವುದೇ ಬಗೆಯ ರಾಗ-ದ್ವೇಷಗಳಿಗೆ ಅವಕಾಶವಿಲ್ಲ. ಜನನ ಮರಣಗಳಿಗೆ ಅತೀತನಾಗಿರುವ ಲಿಂಗದೇವನ ದಿವ್ಯಾನುಭವದ ಆನಂದದಲ್ಲಿದ್ದು ನಾನು ಸುಖಿಯಾದೆನು." ಎಂದು ಗುರು ಬಸವಣ್ಣನವರು ತನ್ಮಯತೆಯಿಂದ ಹೇಳುತ್ತಾರೆ.

1366. ದಾಸೋಹ ಭಾವ

ನಿರಹಂಭಾವದೊಳಗೆ ದಾಸೋಹದ ನಿರಹಂಕೃತಿ ನಿಷ್ಪತ್ತಿಯಾಗಿ
ಎರಡರಿಯದೆ ನಿಜಪರಮಾನಂದದೊಳಿಪ್ಪೆನು
ಲಿಂಗದೇವಯ್ಯಾ

ದಾಸೋಹಭಾವ ಎರಡು ಪ್ರಕಾರವಾಗಿರುತ್ತದೆ. ಲಿಂಗದೇವನೆ ಒಡೆಯ, ನಾನು ಅವನ ದಾಸ, ಸೇವಕ ಎಂದು ಸಂಪೂರ್ಣವಾಗಿ ಶರಣಾಗುವುದು. ಆಗ ನಿರಹಂಭಾವ ಅಳವಟ್ಟು ಪರಿಪಕ್ವತೆ(ನಿಷ್ಪತ್ತಿ) ಅಂಗವಿಸುವುದು. ಆಗ ಅಂಗ-ಲಿಂಗ ಎಂಬ ಭಿನ್ನತೆ ಕರಗಿ

ನಿಜ ಪರಮಾನಂದ ಪ್ರಾಪ್ತಿಯಾಗುವುದು. ಎರಡನೆಯದು ಸಮಾಜ ಸೇವೆಯ ದಾಸೋಹ. ದೇವರು ನಿರಾಕಾರ, ಅವನ ಸಾಕಾರ ಮುಖವೇ ಸಮಾಜ (ಜಂಗಮ) ಎಂದು ಭಾವಿಸಿ ಸಮಾಜ ಸೇವೆ ಮಾಡುತ್ತ ನಿರಹಂಭಾವದಿಂದ ನಡೆದರೆ ಅದರಿಂದಲೂ ನಿಷ್ಪತ್ತಿ(ಪರಿಪಕ್ವತೆ)ಯ ಹಣ್ಣಾಗಲು ಸಾಧ್ಯ.

1367. ಕೂಡಿಕೊಳ್ಳಾ ಲಿಂಗದೇವಾ.

ಅಯ್ಯಾ, ಹಿಂದೆಯಾನು ಮಾಡಿದ ಮೆರಹಿಂದ ಬಂದೆನೀ ಭವದಲ್ಲಿ
ನಿಮ್ಮ ಲೀಲೆ ನಿಮ್ಮ ವಿನೋದ ಸೂತ್ರದಿಂದ
ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗೀತಂಗಳ ಆಡಿ ಹಾಡಿ
ಆ ದಾಸೋಹವೆಂಬ ಮಹಾಗಣ ಸಂಕುಳದೊಳೆನ್ನನಿರಿಸಿ
ನಿಮ್ಮ ಭಕ್ತಿಯ ಘನವ ನೀವೆ ಮೆರೆಯಲೆಂದು
ಪರವಾದಿ ಬಿಜ್ಜಳನ ತಂದೊಡ್ಡಿ, ಎನ್ನನು ಅವನೊಡನೆ ಹೋರಿ,
ಮುನ್ನೂರ ಅರವತ್ತು ಸತ್ತ ಪ್ರಾಣವನೆತ್ತಿಸಿ,
ಮೂವತ್ತಾರು ಕೊಂಡೆಯವ ಗೆಲಿಸಿ
ಎಂಬತ್ತೆಂಟು ಪವಾಡಂಗಳಂ ಕೊಂಡಾಡಿ,
ಮರ್ತ್ಯಲೋಕದ ಮಹಾಗಣಂಗಳು ಒಕ್ಕುದನಿಕ್ಕಿ ಎನ್ನ ಸಲಹಿದಿರಿ
ನಿಮ್ಮ ಮಹಾಗಣಂಗಳು ಮೆಚ್ಚಿ ಎನ್ನ ಸೂತಕವ ತೊಡೆದ ಕಾರಣ
ಪ್ರಭುದೇವರ ಕರುಣದಿಂದ ಪ್ರಾಣಲಿಂಗ ಸಂಬಂಧ ಸಯವಾಯಿತ್ತು
ನೀವು ಕಳುಹಿದ ಬೆಸನು ಸಂದಿತ್ತು
ಉಘೇ! ಇನ್ನು ಕೂಡಿಕೊಳ್ಳಾ ಲಿಂಗದೇವಾ.

ಗುರು ಬಸವಣ್ಣನವರ ಈ ವಚನ ಆತ್ಮಾವಲೋಕನ ಮಾಡಿಕೊಳ್ಳುವ ಬಹಳ ಮಹತ್ವಪೂರ್ಣ ದಾಖಲೆ. ಇಚ್ಛಾಮರಣಿಯಾಗಿ ಲಿಂಗೈಕ್ಯರಾಗುವ ಮೊದಲು ಇದನ್ನು ಬರೆದಿದ್ದಾರೆ.

"ಲಿಂಗದೇವಾ, ಹಿಂದಿನ ಜನ್ಮದಲ್ಲಿ ನಾನು ಮಾಡಿದ ಪುಣ್ಯದಿಂದ (ಮೆರಹಿಂದ) ಅರಿವಿನ ಸೃಷ್ಟಿಯಲ್ಲಿ ಹುಟ್ಟಿದೆ. ನಿಮ್ಮ ಅನುಗ್ರಹ, ವಿನೋದದಿಂದ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗೀತೆಗಳನ್ನು ಹಾಡಿದೆ. (ಅಷ್ಟು ಜನ ಅನುಯಾಯಿಗಳನ್ನು ಪಡೆದೆ.) ಬೃಹತ್ ದಾಸೋಹ ಎಂಬ ಮಹಾಗಣಸಂಕುಳದಲ್ಲಿ ನನ್ನನ್ನು ಇಟ್ಟೆ.

ನಿಮ್ಮ ಅಗಾಧವಾದ ಶಕ್ತಿಯನ್ನು ಮೆರೆಯಲೆಂದು ಭಿನ್ನ ಅಭಿಪ್ರಾಯದ ಬಿಜ್ಜಳನನ್ನು ಮುಂದೆ ಮಾಡಿ, ಅವನೊಡನೆ ಸದಾ ಸಂಘರ್ಷ ಉಂಟಾಗುವಂತೆ ಮಾಡಿದೆ. ಮೂರು ನೂರಾ ಅರವತ್ತು ಸತ್ತ ಜನರಿಗೆ ಪ್ರಾಣವನ್ನು ನಾನು ದಯಪಾಲಿಸಿದೆ. ಮೂವತ್ತಾರು ಬಾರಿ ಚಾಡಿಕೋರರು ಉಂಟು ಮಾಡಿದ ತಪ್ಪು ಕಲ್ಪನೆಯನ್ನು ರಾಜನ ಮನದಿಂದ ನಿವಾರಿಸಿದೆ. ಎಂಬತ್ತೆಂಟು ಪವಾಡಗಳನ್ನು ಮಾಡಿದೆ. ಮರ್ತ್ಯಲೋಕದ ಮಹಾಗಣಂಗಳು ಅರ್ಥಾತ್ ಶರಣರು ಎಲ್ಲ ರೀತಿಯಲ್ಲೂ ಸಹಕರಿಸಿ, ಸಲಹಿದರು. ಮಹಾಗಣಂಗಳಾದ ಶರಣರು ನನ್ನಲ್ಲಿ ಇರಬಹುದಾದ ಕುಂದುಕೊರತೆಗಳನ್ನು ಪರಿಹರಿಸಿದರು. ಪ್ರಭುದೇವರ ಕರುಣದಿಂದ ಪ್ರಾಣಲಿಂಗ ಸಾಕ್ಷಾತ್ಕಾರವಾಯಿತು. ಹೀಗಾಗಿ ನನ್ನ ಜೀವನವು ಪರಿಪೂರ್ಣವಾಯಿತು. ಯಾವ ಮಣಿಹ ಪೂರೈಕೆಗಾಗಿ ನೀವು ಆಜ್ಞೆ ಮಾಡಿ ನನ್ನನ್ನು ಕಳಿಸಿದಿರೋ ಆ ಆಜ್ಞೆ (ಬೆಸನು)ಯನ್ನು ಪೂರ್ಣ ಗೊಳಿಸಿದ್ದೇನೆ. ಉಘೇ! ಇನ್ನು ನನ್ನನ್ನು ನಿನ್ನಲ್ಲಿ ಬೆರೆಸಿಕೋ ಲಿಂಗದೇವ."

ಈ ವಚನದಲ್ಲಿ ಬಸವಣ್ಣನವರ ಜೀವನದ ಸಿಂಹಾವಲೋಕನವಿದೆ. ಅವರಿಗೆ ತಮ್ಮ

ಜೀವಮಾನದಲ್ಲಿ ಸಾಧಿಸಿದ ಸಾಧನೆಯ ಬಗ್ಗೆ ಆತ್ಮತೃಪ್ತಿಯಿದೆ. 36 ಕೊಂಡೆಯವ ಗೆಲಿಸಿ ಎಂಬಲ್ಲಿ ವಿರೋಧಿಗಳು ಬಿಜ್ಜಳನ ಮುಂದೆ ಅಷ್ಟು ಬಾರಿ ಚಾಡಿ ಹೇಳಿದರು. ಆ ಪರೀಕ್ಷೆಗಳನ್ನು ಗುರು ಬಸವಣ್ಣನವರು ಜಯಿಸಿದರು ಎಂಬುದು ತಿಳಿದುಬರುತ್ತದೆ. ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗೀತಂಗಳ ಹಾಡಿ ಎಂಬ ಮಾತು ಅವರು ಬರೆದ ವಚನಗಳ ಸಂಖ್ಯೆ ಹೇಳದೆ ಅನುಯಾಯಿಗಳ ಸಂಖ್ಯೆ ಹೇಳುತ್ತದೆ ಎಂದು ನನ್ನ ಅಭಿಪ್ರಾಯ. ಒಬ್ಬೊಬ್ಬ ಅನುಯಾಯಿಯೂ ಗುರು ಬಸವಣ್ಣನವರು ಹಾಡಿದ ಒಂದು ಗೀತೆ. ಅವರ ಜೀವಿತ ಕಾಲದಲ್ಲಿ ತಯಾರಾದ ಅನುಯಾಯಿಗಳು ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜನ. ಬಿಜ್ಜಳನು ಪರವಾದಿ, ಭಿನ್ನವಿಚಾರದವನು. ಆತ ಗುರು ಬಸವಣ್ಣನವರ ಕ್ರಾಂತಿಕಾರಿ ವಿಚಾರ ಒಪ್ಪುವವನಾಗಿರಲಿಲ್ಲ. 88 ಪವಾಡಗಳನ್ನು ಅಂದರೆ ಅಸಾಮಾನ್ಯ ಕಾರ್ಯಗಳನ್ನು ಪ್ರತ್ಯಕ್ಷ ಮಾಡಿ ತೋರಿಸಿದರು. 360 ಸತ್ತ ಪ್ರಾಣವನು ಎತ್ತಿಸಿ ಎಂದರೆ ಪ್ರಾಣವನ್ನು ಉಳಿಸಿದರು. ಪ್ರಜ್ಞಾಶೂನ್ಯ ಸ್ಥಿತಿಯಲ್ಲಿದ್ದವರನ್ನು ಚಿಕಿತ್ಸೆಯ ಮೂಲಕ ಪ್ರಜ್ಞೆಗೆ ಮರಳುವಂತೆ ಮಾಡಿದ್ದಾರೆ. ಅವರಿಗೆ ವೈದ್ಯಕೀಯ ವಿದ್ಯೆಯೂ ಗೊತ್ತಿದ್ದಂತೆ ಈ ವಚನದಿಂದ ಭಾಸವಾಗುತ್ತದೆ.

1368. ಪ್ರಭುದೇವರ ಐಕ್ಯ

ಆತ್ಮನ ಸುಳುಹು ನಿಂದ ಮತ್ತೆ
ಕಾಯದ ಅವತಾರವಳಿಯಿತ್ತು,
ನೀನೆಂಬ ಭಾವವರತಲ್ಲಿ
ಲಿಂಗದೇವರ ಭಾವ
ಪ್ರಭುದೇವರಲ್ಲಿ ಐಕ್ಯವಾಯಿತ್ತು.

ಆತ್ಮದ ಸಂಚಾರವು ನಿಂತು ಹೋಗುವುದರಿಂದ ಶರೀರವು ನಿಶ್ಚಲವಾಗುವುದು. ನೀನು ಎಂಬ ದೇವಭಾವ ಪಕ್ವವಾದಾಗ ಲಿಂಗದೇವನ ಚೈತನ್ಯವೂ ಧಾರೈಸಿ ಪ್ರಭುದೇವರಲ್ಲಿ ಐಕ್ಯವಾಯಿತು. (ಲಿಂಗದೇವನು ಪ್ರಭುದೇವರನ್ನು ತನ್ನಲ್ಲಿ ಅಡಗಿಸಿಕೊಂಡ.) ಗುರು ಬಸವಣ್ಣನವರು ಕೂಡಲ ಸಂಗಮದಲ್ಲಿ ಲಿಂಗಾಂಗಯೋಗ ಮಗ್ನರಾಗಿದ್ದಾಗ ಅವರ ದಿವ್ಯದೃಷ್ಟಿಗೆ ಪ್ರಭುದೇವರು ಐಕ್ಯರಾದ ಸಂಗತಿ ಗೋಚರವಾಯಿತು.

1369. ಕೈಲಾಸಗಿರಿಯ ಪ್ರಯಾಣ

ಭಕ್ತಿ ಎಂಬ ಪಿತ್ತ ತಲೆಗೇರಿ ಕೈಲಾಸದ ಬಟ್ಟೆಯ ಹತ್ತುವ ವ್ಯರ್ಥರ ಕಂಡು
ಎನ್ನ ಮನ ನಾಚಿತ್ತು, ನಾಚಿತ್ತು
ಕೈಲಾಸವೆಂಬುದೇನೋ, ಪೃಥ್ವಿಯ ಮೇಲೊಂದು ಮೊರಡಿ
ಆ ಪೃಥ್ವಿಗೆ ಲಯವುಂಟು; ಆ ಮೊರಡಿಗೆಯು ಲಯವುಂಟು
ಅಲ್ಲಿರ್ಪ ಗಂಗೆವಾಳುಕಸಮರುದ್ರರಿಗೂ ಲಯವುಂಟು
ಇದು ಕಾರಣ
"ಯದ್ದೃಷ್ಟಂ ತನ್ನಷ್ಟಂ" ಎಂಬ ಶ್ರುತಿಯ ನೋಡಿ ತಿಳಿದು,
ಬಟ್ಟ ಬಯಲು ತುಟ್ಟತುದಿಯ ಮೆಟ್ಟನಿಂದ
ಲಿಂಗದೇವಾ ನಿಮ್ಮ ಶರಣ.

ಭಕ್ತಿ ವೈಚಾರಿಕ ಹಿನ್ನೆಲೆಯಿಂದ ಕೂಡಿದಾಗ ಅಮೃತವಾಗುತ್ತದೆ; ಮೂಢ ಭಕ್ತಿಯಾದಾಗ ಪಿತ್ತವಾಗುತ್ತದೆ. ದುರ್ಗಮವಾದ ಕೈಲಾಸ ಯಾತ್ರೆಯನ್ನು ಮಾಡುತ್ತೇವೆ ಎಂಬ ಆವೇಶದಿಂದ ಕೈಲಾಸ ಪರ್ವತವನ್ನು ಹತ್ತುವ ವ್ಯರ್ಥ ಶ್ರಮಿಕರನ್ನು ಕಂಡು ನನ್ನ ಮನಸ್ಸು ನಾಚುತ್ತದೆ. ಕೈಲಾಸ ಎಂದರೇನು? ಭೂಮಿಯ ಮೇಲಿರುವ ಒಂದು ಬೆಟ್ಟ. ಭೂಮಿಗೆ ನಾಶ ಉಂಟು ಹಾಗೆ ಆ ಬೆಟ್ಟಕ್ಕೂ ನಾಶ ಉಂಟು. ಅಲ್ಲಿ ವಾಸವಾಗಿರಬಹುದಾದ

ರುದ್ರ ಗಣಂಗಳಿಗೂ ನಾಶ ಉಂಟು. "ತನ್ನಲ್ಲಿಯೇ ಸತ್ಯ ತತ್ವವು ಹುದುಗಿದೆ. ತನ್ನಲ್ಲಿಯೇ ಹುಡುಕಿದರೆ ಸಾಕು" ಎಂಬ ಶ್ರುತಿಯ ವಾಕ್ಯವನ್ನು ಮನಗಂಡು ಲಿಂಗದೇವಾ, ನಿಮ್ಮ ಶರಣ ದೇಹದೊಳಗೆ ಅತ್ಯಂತ ಎತ್ತರದಲ್ಲಿರುವ ಸಹಸ್ರಾರು ಚಕ್ರವನ್ನು ಮುಟ್ಟಿ ಬಯಲು ಮೆಟ್ಟನಿಂದ ಅಸಾಮಾನ್ಯ ಸಾಧಕನಾಗುತ್ತಾನೆ.

1370. ತ್ರಿಪುಟಿಯಳಿದ ಸ್ಥಿತಿ

ಅರಿವಿಡಿದು, ಅರಿವನರಿದು
ಅರಿವೆ ನೀವೆಂಬ ಭ್ರಾಂತು ಎನಗಿಲ್ಲವಯ್ಯಾ
ಮರಹವಿಡಿದು, ಮರಹ ಮರೆದು,
ಮರಹು ನೀವೆಂಬ ಮರಹಿನವ ನಾನಲ್ಲವಯ್ಯಾ.
ದೇಹ ಪ್ರಾಣಂಗಳ ಹಿಂಗಿ, ದೇಹವಿಡಿದು
ದೇಹ ನಿಮ್ಮದೆಂಬ ಭ್ರಾಂತು ಸೂತಕಿ ನಾನಲ್ಲವಯ್ಯಾ
ನಿಮ್ಮ ಅರಿದ ಅರಿವ ಭಿನ್ನವಿಟ್ಟು ಕಂಡೆನಾದಡೆ
ನಿಮ್ಮಾಣೆ ಕಾಣಾ, ಲಿಂಗದೇವಾ!

ಅರಿವು ಹಿಡಿದು ಅರಿವನರಿದು (ಪರಮಾತ್ಮನ ಜ್ಞಾನ) ಆ ಅರಿವೆ ದೇವರು ಎಂಬ ಭ್ರಾಂತಿಯಳಿದಿದೆ. ಮರಹು ಅಂದರೆ ಅಜ್ಞಾನವಲ್ಲ-ತನ್ಮಯತೆ. ಅದನ್ನು ಹಿಡಿದು ಮರಹ ಮರೆದು (ಹೊರಗಿನ ಪ್ರಜ್ಞೆ ಅಳಿದು) ಆ ತನ್ಮಯತೆ ಒಂದು ಪರಿಣಾಮವೇ ಹೊರತು ಅದೇ ದೇವರಲ್ಲ ಎಂಬ ಭಾವ ಅಳವಟ್ಟಿದೆ. ದೇಹಗುಣ ಪ್ರಾಣಗುಣಗಳು ಹಿಂಗಿ ದೇಹಧಾರಿಯಾಗಿರುವುದರಿಂದ ದೇಹ ನಿಮ್ಮದು ಎಂಬ ಭ್ರಾಂತಿ ಉಳಿದಿಲ್ಲ. ದೇಹದಲ್ಲಿ ದೇವನ (ಲಿಂಗ)ಪ್ರವೇಶವಾಗಿದ್ದರೂ ಭೂಮಿಯ ಮೇಲೆ ದೇಹ ಸುಳಿದಾಡುತ್ತಲಿದೆ. ಹೀಗಾಗಿ ಅದರ ಅಸ್ತಿತ್ವವನ್ನು ನಿರಾಕರಿಸಲು ಆಗುವುದೆ? ಇಲ್ಲಿ ಜ್ಞಾನ ಅರ್ಥಾತ್ ಅರಿಯುವಿಕೆ, ಜ್ಞೇಯ(ದೇವರು) ಮತ್ತು ಜ್ಞಾತೃ (ಅರಿಯುವ ಜೀವ) ಮೂರು ಒಂದಾಗಿ ತ್ರಿಪುಟಿಯಳಿದ ಸ್ಥಿತಿ ಪ್ರಾಪ್ತವಾಗಿದೆ.

1371. ಭಾವಲಿಂಗೈಕ್ಯ ಸ್ಥಿತಿ-ಶಬ್ದ ಮುಗ್ಧತೆ

ಅರಿಯಲಿಲ್ಲದ ಅರಿವು ಅವಗ್ರಹಿಸಿತ್ತಾಗಿ
ಅರಿಯಲಿಲ್ಲದ ಮರೆಯಲಿಲ್ಲದ ನಿಜವು ನಿಂದಿತ್ತಾಗಿ,
ನಿರ್ನಾಮವಾಯಿತ್ತು, ನಿಃಪತಿಯಾಯಿತ್ತು.
ಅಗಮ್ಯದಲ್ಲಿ ಗಮನ ಕೆಟ್ಟಿತ್ತು, ನಿಂದಲ್ಲಿ ನಿರಾಳವಾಯಿತ್ತು.
ಲಿಂಗದೇವರಲ್ಲಿ ಶಬ್ದ ಮುಗ್ಧವಾಯಿತ್ತು.

ಅರಿಯಲಿಲ್ಲದ ಅರಿವು-ಅರಿಯಲಸಾಧ್ಯವಾದ ದೇವರ ಜ್ಞಾನ ಬಂದು ಗುರು ಬಸವಣ್ಣನವರನ್ನು ಆಕ್ರಮಿಸಿಕೊಂಡಿತು. ಲಿಂಗದೇವನು ಅರಿಯಲಿಲ್ಲದ ಅರಿವು-ಏಕೆಂದರೆ ಅವನೊಡನೆ ಭಾವೈಕ್ಯವಾದಾಗ ಅರಿವು (ಬುದ್ಧಿಯ ಜ್ಞಾನ) ಸ್ತಬ್ಧವಾಗಿರುತ್ತದೆ. ದೇವನು ಮರೆಯಲಿಲ್ಲದ ನಿಜವೂ ಹೌದು ತನ್ಮಯತೆಗೆ ಕಾರಣವಾಗುವ ಚೈತನ್ಯ. ಅಂಥ ತನ್ಮಯತೆ ಪ್ರಾಪ್ತಿಯಾದಾಗ ಚಿತ್ತ, ಮನ, ಬುದ್ಧಿ, ಅಹಂ ಮತ್ತು ಭಾವಗಳು ತಮ್ಮ ಗುಣಗಳನ್ನು ನಿರ್ನಾಮ ಮಾಡಿಕೊಳ್ಳುತ್ತವೆ. ನಿಃಪತಿ ಸ್ಥಿತಿ ಅಂದರೆ ನಿಷ್ಪತ್ತಿಯಾದ ನಿರ್ಲೇಪ ಸ್ಥಿತಿ ಪ್ರಾಪ್ತವಾಗುವುದು. ಅಗಮ್ಯನಾದ ಪರಮಾತ್ಮನ(ಲಿಂಗದಲ್ಲಿ)ಲ್ಲಿ ಜೀವಾತ್ಮ ಹುದುಗಿಕೊಂಡಿತು. ಆಗ ಒಂದು ಬಗೆಯ ನಿರಾಳಸ್ಥಿತಿ ಪ್ರಾಪ್ತವಾಯಿತು. ಲಿಂಗದೇವನಲ್ಲಿ ಭಾವೈಕ್ಯ ಸ್ಥಿತಿ ಅಳವಟ್ಟಾಗ ಮಾತು ನಿಂತು ಹೋಗಿ ಶಬ್ದ ಮುಗ್ಧತೆ ಪ್ರಾಪ್ತಿಯಾಗುವುದು.

1372. ಸರ್ವ ನಿವಾಸಿಯಾದೆನು

ಅರಿವನಕ್ಕರ ಅರ್ಚಿಸಿದೆ, ಅರಿವನ್ನಕ್ಕರ ಪೂಜಿಸಿದೆ,
ಅರಿವನಕ್ಕರ ಹಾಡಿ ಹೊಗಳಿದೆ
ಅರಿವುಗೆಟ್ಟು ಮರಹು ನಷ್ಟವಾಗಿ
ಭಾವ ನಿರ್ಭಾವವಾಗಿ ನಿಜವೊಳಕೊಂಡಿತ್ತಾಗಿ
ಲಿಂಗದೇವನಲ್ಲಿ ಸರ್ವ ನಿವಾಸಿಯಾಗಿರ್ದೆನು.

ಗುರು ಬಸವಣ್ಣನವರು ಮಹಾಯೋಗಿಗಳು. ಇಚ್ಛಾಮರಣಿಯಾಗಿ ಲಿಂಗೈಕ್ಯರಾಗುವಿಕೆಯನ್ನು ಹಂತ ಹಂತವಾಗಿ ಚಿತ್ರಿಸುತ್ತಿದ್ದಾರೆ. ಅರಿವನ್ನಕ್ಕರ-ಬುದ್ಧಿ ಕೆಲಸ ಮಾಡುವವರೆಗೆ ನಾನು ಅರ್ಚನೆ ಮಾಡಿದೆ. ಪ್ರಜ್ಞೆ ಕೆಲಸ ಮಾಡುವವರೆಗೆ ಪೂಜಿಸಿದೆ. ನನ್ನ ಬುದ್ಧಿಯು ಕೆಲಸ ಮಾಡಲಾರದ ಪ್ರಜ್ಞಾತೀತ (ಪ್ರಜ್ಞಾ ಹೀನವಲ್ಲ) ಸ್ಥಿತಿ ತಲ್ಪಿದಾಗ ಮರೆವು ನಷ್ಟವಾಯಿತು. ಅನುಭವಿಸುವ ಇಂದ್ರಿಯವಾದ ಭಾವ ನಿಜ ತತ್ವವಾದ ದೇವನನ್ನು ಒಳಕೊಂಡು ನಿರ್ಭಾವವಾಯಿತು. ಆಗ ನಾನು ಉರಿಯು ಉಂಡ ಕರ್ಪುರದಂತೆ, ನೀರಿನಲ್ಲಿ ಕರಗಿದ ಸಕ್ಕರೆ ಗೊಂಬೆಯಂತೆ ಲಿಂಗದೇವನಲ್ಲಿ ಸರ್ವನಿವಾಸಿಯಾಗಿರ್ದೆನು ಅಂದರೆ ಕರಗಿ ಹೋದೆನು.

1373. ಪ್ರಾಣ ವಿಸರ್ಜನೆ

ಲಿಂಗ ಗಂಭೀರ ಗಮನಗೆಟ್ಟುದಲ್ಲಾ
ಜಂಗಮ ಗಂಭೀರ ಸುಳುಹುಗೆಟ್ಟುದಲ್ಲಾ,
ಪ್ರಸಾದ ಗಂಭೀರ ರೂಪುಗೆಟ್ಟುದಲ್ಲಾ,
ಆಚಾರ ಗಂಭೀರ ಅವಯವಗೆಟ್ಟುದಲ್ಲಾ
ಜ್ಞಾನ ಗಂಭಿರ ನಡೆಗೆಟ್ಟುದಲ್ಲಾ
ಪ್ರಭುದೇವರು ಆ ನಿಜವನೈದಲು
ಲಿಂಗದೇವರಲ್ಲಿ ಸಂಗನ ಬಸವಣ್ಣನ
ಪ್ರಾಣ ಒಡನೆ ಬಳಿಸಂದಿತ್ತಲ್ಲಾ!

ಕಾಲಜ್ಞಾನ ವಚನದ ಪ್ರಕಾರ ಅಲ್ಲಮ ಪ್ರಭುದೇವರು ಲಿಂಗೈಕ್ಯರಾದುದು ನಳನಾಮ ಸಂವತ್ಸರದ ಆಷಾಢ ಪ್ರತಿಪದೆಯಂದು. ಲಿಂಗಾಂಗ ಯೋಗದಲ್ಲಿ ಕುಳಿತ ಗುರು ಬಸವಣ್ಣನವರಿಗೆ ಅಲ್ಲಮ ಪ್ರಭುದೇವರು ಐಕ್ಯರಾದ ಸಂಗತಿ ದೃಗ್ಗೋಚರವಾಗುತ್ತದೆ.

ಲಿಂಗ ಗಂಭೀರ ಎಂದರೆ ಲಿಂಗದೇವನ ಅನುಗ್ರಹ ಅಳವಟ್ಟ ಪ್ರಭುದೇವರ ನಡೆ ಗಮನಗೆಟ್ಟಿತ್ತು, ಚಟುವಟಿಕೆ ನಿಂತಿತು. ಜಂಗಮ ಗಂಭೀರ-ಜಂಗಮ ತತ್ವ ಅಳವಟ್ಟು ಪರಿಪೂರ್ಣರಾದ ಅಲ್ಲಮಪ್ರಭು ದೇವರ ಸುಳುಹು ಅಂದರೆ ಓಡಾಟ ನಿಂತು ಹೋಯಿತು. ಶರೀರವಿರುವವರೆಗೂ ಆಹಾರವನ್ನು ಪ್ರಸಾದ ರೂಪದಲ್ಲಿ ಸ್ವೀಕರಿಸಿ ಪ್ರಸಾದ ಕಾಯದವರಾದ ಅಲ್ಲಮಪ್ರಭು ದೇವರ ದೇಹವು ರೂಪುಗೆಟ್ಟಿತು. ಸದಾಚಾರವನ್ನು ಮೈಗೂಡಿಸಿಕೊಂಡು ದೈವೀಕಾಯದವರಾದ ಪ್ರಭುದೇವರ ದೇಹವು ಅವಯವಗಳನ್ನು ಕಳಚಿಕೊಂಡಿತು. ಜ್ಞಾನವೇ ಸಾಕಾರಗೊಂಡ ಪ್ರಭುದೇವರು ಐಕ್ಯರಾಗಲು ಅವರ ದೇಹ ನಡೆಗೆಟ್ಟಿತು. ಹೀಗೆ ಪ್ರಭುದೇವರು ಸತ್ಯ ತತ್ವವಾದ ಪರಮಾತ್ಮನಲ್ಲಿ ಐಕ್ಯರಾದರು. ಈಗ ನನ್ನ ಪ್ರಾಣವೂ ಲಿಂಗದೇವನ ಬಳಿಗೆ ಸಾಗಲು ಅವಸರಿಸುತ್ತಿದೆಯಲ್ಲಾ!

1374. ಕ್ರಿಯಾತೀತ

ಅರ್ಪಿತವೆಂಬೆನೆ?
ದೇವರೊಂದಿಲ್ಲವಾಗಿ, ಅರ್ಪಿಸುವ ಭಕ್ತ ಮುನ್ನವೆ ಇಲ್ಲ.

ಅರ್ಪಿತ ಅನರ್ಪಿತ ನೀನೆ ಎಂಬೆ, ಲಿಂಗದೇವಾ

ಅರ್ಪಿತ ಅರ್ಪಣೆ ಎಂಬ ಕ್ರಿಯೆಗಳು ದೇವರು ಮತ್ತು ಭಕ್ತ ಇಬ್ಬರ ನಡುವೆ ನಡೆಯುವ ಕ್ರಿಯೆಗಳು. ಸಾಧನೆಯ ಆರಂಭದಲ್ಲಿ ಎರಡೂ ಉಂಟು. ಅಂತಿಮ ಸ್ಥಿತಿಗೆ ಬಂದಾಗ ಅಂಗ-ಲಿಂಗ ಒಂದಾದ ಸ್ಥಿತಿಯಲ್ಲಿ ದೇವರೂ ಇಲ್ಲ, ಭಕ್ತನೂ ಇಲ್ಲ. ಅರ್ಪಿಸುವ ಕ್ರಿಯೆ ಮೊದಲೇ ಇಲ್ಲ. ಈ ಅದ್ವೈತಾನುಭವ ಸ್ಥಿತಿಯಲ್ಲಿ ಅರ್ಪಿತ. ಅನರ್ಪಿತ ಎಂಬ ಭಾವವೂ ಇರದು. ಎಲ್ಲವೂ ಲಿಂಗದೇವಮಯ.

1375. ಶರಣರ ಘನ ಸಾಧನೆ

ಯೋಗಾಂಗ ಭೋಗಾಂಗ ತ್ಯಾಗಾಂಗ
ಈ ತ್ರಿವಿಧವನು ಮರೆದು
ಭಕ್ತಿಯೋಗದ ಮೇಲೆ ನಿಂದು ವೈರಾಗ್ಯಯೋಗದ ಮೇಲೆ ನಿಂದು,
ನಡೆದು ನುಡಿದು ತೋರುವರು ಎಮ್ಮ ಶರಣರು
ಗುರು ಲಿಂಗ ಜಂಗಮ ಈ ತ್ರಿವಿಧವನು.
ಸುಖ-ದುಃಖ, ಚಿಂತೆ, ಸಂತೋಷವೆಂಬುದು ಕಳೆದು
ಉತ್ಪತ್ತಿಸ್ಥಿತಿಲಯವೆಂಬುವ ಸುಟ್ಟು
ದೃಕ್ಕು, ದರ್ಶನ, ದೃಶ್ಯವೆಂಬ ತ್ರಿಪುಟಿಯ ಏಕವಮಾಡಿ
ಪಿಂಡಾಂಡ ಬ್ರಹ್ಮಾಂಡವೊಂದೆಂಬುದ ಅರಿದು
ಸಂದ ಹರಿದು ನಿಂದ ನಿಜಾನಂದದಲ್ಲಿ
ಹಿಂದು ಮುಂದೆಂಬುದನರಿಯದೆ
ನಿಮ್ಮೊಳೊಂದಾದ ಲಿಂಗೈಕ್ಯಂಗೆ ವಂದಿಸಿ ವಂದಿಸಿ ಎನ್ನ ಬಂಧನ
ಹರಿಯಿತ್ತು, ನಾನು ಬಟ್ಟಬಯಲಾದೆನಯ್ಯಾ, ಲಿಂಗದೇವಾ

ಲಿಂಗಾಂಗ ಯೋಗದ ಸಾಧನೆಯಲ್ಲಿ ಹಂತಗಳು ಮೂರು, ತ್ಯಾಗಾಂಗ, ಭೋಗಾಂಗ, ಯೋಗಾಂಗ ಎಂಬುದಾಗಿ. ಮೊದಲ ಹಂತದಲ್ಲಿ ವಿಷಯಗಳನ್ನು ತ್ಯಾಗ ಮಾಡಬೇಕು. ಇಂದ್ರಿಯಗಳನ್ನು ಅವುಗಳ ವಿಷಯದಿಂದ ಬೇರ್ಪಡಿಸಬೇಕು. ಇದು ಪದಾರ್ಥ ತ್ಯಾಗ. ಮುಂದಿನದು ಪ್ರಸಾದ ಭೋಗ. ಆಹಾರವಾಗಲಿ, ಜೀವನದ ಪ್ರಸಂಗಗಳಾಗಲಿ ತನಗೆ ಲಭ್ಯವಾದುದನ್ನು ದೇವನ ಪ್ರಸಾದವೆಂದು ಸ್ವೀಕರಿಸಬೇಕು. ಬೇಕು-ಬೇಡೆಂಬ ಬಯಕೆಗಳೇ ಇಲ್ಲದ ನಿರ್ವಿಕಾರ ಸ್ಥಿತಿ ಇದು. ನಂತರ ಲಿಂಗಯೋಗ. ಉಡುವೆ ನಾನು ಲಿಂಗಕ್ಕೆಂದು, ತೊಡುವೆ ನಾನು ಲಿಂಗಕ್ಕೆಂದು ಎಂಬ ದೇವನಿಗಾಗಿಯೇ ದೇಹಭಾವ ತೊರೆದು ದೇವಭಾವ ಹೊಂದಿ ಬದುಕುವ ಸ್ಥಿತಿ.

ಶರಣನು ಈ ಮೂರು ಸ್ಥಿತಿಗಳನ್ನು ದಾಟಿ, ಭಕ್ತಿಯೋಗವನ್ನು ಅಳವಡಿಸಿಕೊಂಡು, ವೈರಾಗ್ಯಭಾವವನ್ನೂ ಅಳವಡಿಸಿಕೊಂಡು ನಡೆದು, ನುಡಿದು ತೋರುವನು. ಗುರು-ಲಿಂಗ-ಜಂಗಮ ತತ್ವಗಳನ್ನು ಅಳವಡಿಸಿಕೊಳ್ಳುವನು. ಸುಖ-ದುಃಖ, ಚಿಂತೆ-ಸಂತೋಷ ಎಂಬ ದ್ವಂದ್ವಗಳನ್ನು ದಾಟಿ, ಜನನ-ಜೀವನ-ಮರಣ ಎಂಬ ಬಾಧೆಗಳನ್ನು ಸುಟ್ಟು ನಿಲ್ಲುವನು. ದೃಕ್ಕು, ದರ್ಶನ ಮತ್ತು ದೃಶ್ಯವಾದ ಜಗತ್ತಿನಲ್ಲಿ ತಾನು ಅಚಲನಾಗಿ ನಿಲ್ಲುವನು. ನೋಡುವವ ಜೀವ, ನೋಡುವಿಕೆ ಕ್ರಿಯೆ ನೋಡಲ್ಪಡುವುದು ಜಗತ್ತು. ಶರಣನು ದೇವಭಾವದಿಂದ ಜಗತ್ತನ್ನು ನೋಡುವನು. ಪಿಂಡಾಂಡ ಬ್ರಹ್ಮಾಂಡಗಳು ಸ್ವರೂಪದಲ್ಲಿ ಒಂದೆ, ಗಾತ್ರದಲ್ಲಿ ಬೇರೆ ಎಂಬುದನ್ನು ಅರಿಯುವನು. ಪಿಂಡಾಂಡವು ಪಂಚಭೂತಗಳಿಂದ ಆಗಿದೆ. ಬ್ರಹ್ಮಾಂಡವೂ ಪಂಚಭೂತಗಳಿಂದ ಆಗಿದೆ. ಪಿಂಡ (ಆತ್ಮ)ವು ಸಚ್ಚಿದಾನಂದ ಸ್ವರೂಪದ್ದು, ಬ್ರಹ್ಮ (ಪರಮಾತ್ಮ)ವೂ ಸಚ್ಚಿದಾನಂದ ಸ್ವರೂಪದ್ದು ಆಗಿದೆ. ಈ ಅರಿವನ್ನು

ಶರಣನು ಪಡೆವನು. "ಲೋಕಲೌಕಿಕದ ಸಂದು ಹರಿದುಕೊಂಡು ನಿಜಾನಂದವನ್ನು ಹೊಂದಿ ಬಹಿರಂಗದ ಪ್ರಜ್ಞೆಯನ್ನು ಅಳಿದುಕೊಂಡು ಭಾವ ಲಿಂಗೈಕ್ಯನಾದ ಶರಣನಿಗೆ ವಂದಿಸಿ ನನ್ನ ಭವಬಂಧನ ಕಳೆಯಿತು. ನಾನೂ ಬಯಲಾದೆ." ಎನ್ನುವರು ಗುರು ಬಸವಣ್ಣನವರು.

1376. ಇಂಬಿಟ್ಟುಕೊಳ್ಳಲು ಪ್ರಾರ್ಥನೆ

ಉರಿಯೊಳಗಣ ಕರ್ಪುರಕ್ಕೆ ಸರಿಯುಂಟೆ ಅಯ್ಯಾ?
ಬಯಲ ಮರೀಚಿಜಲಕ್ಕೆ ಕೆಸರುಂಟೆ?
ವಾಯುವನಪ್ಪಿದ ಪರಿಮಳಕ್ಕೆ ನಿರ್ಮಾಲ್ಯವುಂಟೆ?
ನೀವು ನೆರೆ ಒಲಿದ ಬಳಿಕ ಎನಗೆ ಭವವುಂಟೆ?
ಲಿಂಗದೇವಾ, ನಿಮ್ಮ ಚರಣಕಮಲದೊಳಗೆನ್ನನಿಂಬಿಟ್ಟುಕೊಳ್ಳಯ್ಯಾ.

ಬೆಂಕಿಯ ಸಂಪರ್ಕಕ್ಕೆ ಬಂದ ಕರ್ಪುರ ಏನಾದರೂ ಶೇಷವನ್ನು ಉಳಿಸುವುದೆ? ಬಿಸಿಲ್ಗುದುರೆ ಎಂಬ ಮರೀಚಿಕೆಯ ಕಾಲ್ಪನಿಕ ಜಲಕ್ಕೆ ಕೆಸರು ಇರುವುದೆ? ಗಾಳಿಯನ್ನು ಅಪ್ಪಿದ ಪರಿಮಳಕ್ಕೆ, ಸುವಾಸನೆಗೆ ನಿರ್ಮಾಲ್ಯ (ಒಣಗಿದ ಹೂವು) ಇರುವುದೆ? ನೀವು ಅನುಗ್ರಹಿಸಿ ಒಲಿದ ಬಳಿಕ ಇನ್ನು ಭವ-ಜನನ ಮರಣಗಳ ಜಂಜಡ ಇರುವುದೆ? ಲಿಂಗದೇವಾ, ಈಗ ನಾನು ಉರಿಯೊಳಗಣ ಕರ್ಪುರದಂತೆ, ಬಯಲ ಮರೀಚಿ ಜಲದಂತೆ ವಾಯುವನಪ್ಪಿದ ಪರಿಮಳದಂತೆ ಆಗಿದ್ದೇನೆ. ಆದ್ದರಿಂದ ನಿಮ್ಮ ಚರಣ ಕಮಲದಲ್ಲಿ ಎನ್ನ ಇಂಬಿಟ್ಟುಕೋ, ದೇವಾ." ಎಂದು ಗುರು ಬಸವಣ್ಣನವರು ಲಿಂಗದೇವನಲ್ಲಿ ಪ್ರಾರ್ಥಿಸುತ್ತಾರೆ.

1377. ಲಿಂಗೈಕ್ಯರಾದ ಬಗೆ.

ಧರೆಯಾಕಾಶದ ನಡುವೆ ಒಂದು ಮಾಮರ ಹುಟ್ಟಿತ್ತು.
ಆ ಮರಕ್ಕೆ ಕೊಂಬೆ ಎರಡು, ಎಲೆ ಆರು
ಮೂವತ್ತಾರು ಪುಷ್ಪ, ಕಾಯಿ ಒಂದೆ!
ಹಣ್ಣು ರಸ ತುಂಬಿದಲ್ಲಿ ಏನನೂ ಕಾಣೆ!
ಎಲೆ ಉದುರಿದಡೆ ಹಣ್ಣು ತೊಟ್ಟು ಬಿಟ್ಟು ಬಿದ್ದಿತ್ತು.
ಆ ಹಣ್ಣ ಪ್ರಭುದೇವರು ಆರೋಗಣೆಯ ಮಾಡಿ
ನಿಜದಲ್ಲಿ ನಿರ್ವಯಲಾದರು
ಪ್ರಭುವಿನ ಕಾರುಣ್ಯ ಪ್ರಸಾದವ ನಾನು ಕೊಂಡೆನಾಗಿ
ಲಿಂಗದೇವರು ಇತ್ತ ಬಾರೆಂದು
ತಮ್ಮ ಹೃದಯಕಮಲದಲ್ಲಿ ಇಂಬಿಟ್ಟುಕೊಂಡರು.

ಧರೆಯಾಕಾಶದ ನಡುವೆ ಇರುವ ಮರ್ತ್ಯಲೋಕದಲ್ಲಿ ಭಕ್ತಿ ಎಂಬ ಒಂದು ಮಾವಿನ ಗಿಡ ಹುಟ್ಟಿತ್ತು. ಇದರಲ್ಲಿ ಅಂಗ ಮತ್ತು ಲಿಂಗ ಎಂಬ ಎರಡು ಕೊಂಬೆಗಳು ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರು ಸ್ಥಲಗಳು. ಇವೇ ಆ ಮರದ ಆರು ಎಲೆ. ಈ ಷಟ್ ಸ್ಥಲಗಳಲ್ಲಿ ಒಂದೊಂದಕ್ಕೆ ಆರು ಉಪಸ್ಥಲಗಳು. ಒಟ್ಟು 36 ಉಪಸ್ಥಲಗಳು. ಇವೆಲ್ಲವೂ ಸೇರಿ ಬಿಡುವ ದಿವ್ಯಾನುಭವ ಎಂಬ ಕಾಯಿ ಒಂದೆ. ಹಣ್ಣು ರಸ ತುಂಬಿದಲ್ಲಿ ಅಂದರೆ ದಿವ್ಯಾನುಭವ ಪಕ್ವವಾಗಿ ದಿವ್ಯಾನಂದ, ತನ್ಮಯತೆ ಪ್ರಾಪ್ತಿಯಾದಾಗ ಇನ್ನೇನೂ ಕಾಣುವುದಿಲ್ಲ.

ಷಟಸ್ಥಲಕ್ಕೆ ಅತೀತವಾಗಿ ನಿಂತ ಈ ಅನುಭವವನ್ನು ಪ್ರಭುದೇವರು ಆರೋಗಣೆ

ಮಾಡಿದರು. ಪರಮಾನಂದ ಸ್ಥಿತಿಯನ್ನು ಪಡೆದು ಲಿಂಗದೇವ (ನಿಜದಲ್ಲಿ)ನಲ್ಲಿ ನಿರ್ವಯಲಾದರು. "ಅಂಥ ಪ್ರಭುವಿನ ಕಾರುಣ್ಯದ ಪ್ರಸಾದವನ್ನು ನಾನು ಕೊಂಡೆನಾಗಿ ನನ್ನನ್ನು ಲಿಂಗದೇವರು ಇತ್ತ ಬಾ ಎಂದು ತಮ್ಮ ಹೃದಯಕಮಲದಲ್ಲಿ ಇಂಬಿಟ್ಟುಕೊಂಡರು." ಎನ್ನುತ್ತಾರೆ ಗುರು ಬಸವಣ್ಣನವರು. ಇಚ್ಛಾಮರಣಿಯಾಗಿ ಗುರು ಬಸವಣ್ಣನವರು ಲಿಂಗೈಕ್ಯರಾದ ಬಗೆಯನ್ನು ಈ ವಚನವು ಚೆನ್ನಾಗಿ ವಿವರಿಸುತ್ತದೆ.

1378. ವಿಷಾದ ಗೀತೆ

ಬಿತ್ತಿತ್ತು ಬೆಳೆಯಿತ್ತು ಕೆಯ್ಯ ಕೊಯ್ಯಿತ್ತು ಗೂಡು ಮುರಿಯಿತ್ತು
ಕುತ್ತರಿಯೊಟ್ಟಿತ್ತು ಒಕ್ಕಿತ್ತು ತೂರಿತ್ತು ಅಳೆಯಿತ್ತು. ಸಲಗೆ ತುಂಬಿತ್ತು
ಲಿಂಗದೇವಯ್ಯಾ, ಮೇಟಿ ಕಿತ್ತಿತ್ತು, ಕಣ ಹಾಳಾಯಿತ್ತಯ್ಯಾ.

ಈ ವಚನ ಒಂದು ರೀತಿಯಲ್ಲಿ ಗುರು ಬಸವಣ್ಣನವರ ಜೀವನದ ಸಮಗ್ರ ಚಿತ್ರಣವಾಗಿದೆ. ರೈತರ ಒಕ್ಕಲುತನದ ಭಾಷೆಯಲ್ಲಿ ಈ ಚಿತ್ರಣವನ್ನು ಗುರು ಬಸವಣ್ಣನವರು ನೀಡಿದ್ದಾರೆ. ಬಿತ್ತುತ್ತಾರೆ, ಬೆಳೆಯುತ್ತಾರೆ, ಬೆಳೆಯನ್ನು ಕೊಯ್ಯುತ್ತಾರೆ, ತೆನೆಯನ್ನು ಗೂಡು ಹಾಕುತ್ತಾರೆ. ನಂತರ ಗೂಡನ್ನು ಮುರಿದು ಮೇಟಿಯ ಸುತ್ತ ಹರಡು (ಕುತ್ತರಿಯೊಟ್ಟಿತ್ತು)ತ್ತಾರೆ. ಎತ್ತುಗಳಿಂದ ತುಳಿಸುತ್ತಾರೆ. ಕಾಳನ್ನು ಬೇರ್ಪಡಿಸಿ ತೂರುತ್ತಾರೆ, ರಾಶಿ ಮಾಡುತ್ತಾರೆ. ಆ ರಾಶಿಯನ್ನು ಮಾಪನಗಳಲ್ಲಿ ಅಳೆದು ಸಲಗೆ (ದೊಡ್ಡ ದೊಡ್ಡ ಬಿದಿರಿನ ಬುಟ್ಟಿಗಳು)ಗಳಲ್ಲಿ ತುಂಬಿಡುತ್ತಾರೆ.

ಗುರು ಬಸವಣ್ಣನವರು ಕಲ್ಯಾಣಕ್ಕೆ ಬಂದರು. ಭಕ್ತಿಯನ್ನು ಬಿತ್ತಿದರು; ಜ್ಞಾನದ ಬೆಳೆಯನ್ನು ಬೆಳೆದರು. ವಚನ ಸಾಹಿತ್ಯದ ಕಾಳಿದ ರಾಶಿಯೇ ಬಿದ್ದಿತು. ಶರಣರು ಆ ರಾಶಿಯನ್ನು ಅಳೆದರು; ಮುಂದಿನ ಜನಾಂಗಕ್ಕಾಗಿ ಸಲಗೆಗಳಲ್ಲಿ ತುಂಬಿಟ್ಟರು. ಅಷ್ಟರಲ್ಲಿ ವರ್ಣಾಂತರ ವಿವಾಹದಿಂದಾಗಿ ಗುರು ಬಸವಣ್ಣನವರು ಕಲ್ಯಾಣದಿಂದ ನಿರ್ಗಮಿಸಿದರು; ಕಲ್ಯಾಣವೆಂಬ ಕಣ ಹಾಳಾಗಿ ಕಟುಕರ ಕೇರಿಯಾಯ್ತು.

1379. ನಿಧಾನವಾಗಿ ಸಾಧನೆ ಮಾಡುವುದು.

ಮೆಲ್ಲ ಮೆಲ್ಲನೆ ಭಕ್ತನೆನಿಸಿಕೊಂಬೆ
ಮೆಲ್ಲ ಮೆಲ್ಲನೆ ಮಹೇಶ್ವರನೆನಿಸಿಕೊಂಬೆ
ಮೆಲ್ಲಮೆಲ್ಲನೆ ಪ್ರಸಾದಿ ಎನಿಸಿಕೊಂಬೆ
ಮೆಲ್ಲಮೆಲ್ಲನೆ ಪ್ರಾಣಲಿಂಗಿ ಎನಿಸಿಕೊಂಬೆ
ಮೆಲ್ಲಮೆಲ್ಲನೆ ಶರಣನೆನಿಸಿಕೊಂಬೆ
ಮೆಲ್ಲಮೆಲ್ಲನೆ ಐಕ್ಯನೆನಿಸಿಕೊಂಬೆ,
ಮೆಲ್ಲಮೆಲ್ಲನೆ ಷಟಸ್ಥಲವ ಮೀರಿ
ನಿರವಯಸ್ಥಲವನೈಯ್ದುವೆನಯ್ಯಾ ಲಿಂಗದೇವಾ.

ಸಾಧಕರು ಎಲ್ಲರೂ ಒಂದೇ ಮಟ್ಟದವರಿರುವುದಿಲ್ಲ. ಕೆಲವರು ತ್ವರಿತಗತಿಯಲ್ಲಿ ಮುನ್ನಡೆ ಸಾಧಿಸುತ್ತಾರೆ. ಮತ್ತೆ ಕೆಲವರು ನಿಧಾನಗತಿಯಲ್ಲಿ ಮುಂದುವರಿಯುತ್ತಾರೆ. ನಿಧಾನಗತಿಯವರು ನಿರಾಶರಾಗಬೇಕಾಗಿಲ್ಲ. ಲಿಂಗಧಾರಿಗಳಾದವರೆಲ್ಲರೂ ಆದಿ ಶರಣರು ಸಾಧಿಸಿದ ಸಾಧನೆ ಮಾಡುವರೆಂದು ಹೇಳಲಿಕ್ಕಾಗದು. ಲಿಂಗಧಾರಣೆಯಾದ ಮೇಲೆ ಪರಿವರ್ತನೆಗೊಳ್ಳಬೇಕು. ಭಕ್ತಸ್ಥಲದ ಲಕ್ಷಣ ಅಳವಡಿಸಿಕೊಳ್ಳಬೇಕು. ಶ್ರದ್ಧಾ ಭಕ್ತಿಯು ವಿಶೇಷ ಲಕ್ಷಣವಾಗಬೇಕು. ನಂತರ ಮಹೇಶ್ವರ ಸ್ಥಲದ ನಿಷ್ಠಾಭಕ್ತಿಯನ್ನು ಅಳವಡಿಸಿಕೊಂಡು ಏಕದೇವೋಪಾಸಕ-ಲಿಂಗ ನಿಷ್ಠಾಪರನಾಗಬೇಕು ಪ್ರಸಾದಿ ಸ್ಥಲದ ಅನುಭವ ಭಕ್ತಿ ಅಳವಡಿಸಿಕೊಂಡು ಸುಖ-ದುಃಖ, ಸ್ತುತಿ-ನಿಂದೆ ಎಲ್ಲವನ್ನೂ ದೇವರ ಪ್ರಸಾದವೆಂದು ಸಮಚಿತ್ತದಿಂದ ಸ್ವೀಕರಿಸಬೇಕು. ನಂತರ ಪ್ರಾಣಲಿಂಗಿ ಸ್ಥಲದ ಅವಧಾನ

ಭಕ್ತಿ ಅಳವಡಿಸಿಕೊಂಡು ಯೋಗಸಾಧನೆ ಮಾಡಬೇಕು. ನಂತರ ಶರಣ ಸ್ಥಲದ ಆನಂದ ಭಕ್ತಿ ಅಳವಡಿಸಿಕೊಂಡು ಶರಣ ಸತಿ ಭಾವದಿಂದ ಲಿಂಗಪತಿಯನ್ನು ಆರಾಧಿಸಬೇಕು. ಕಡೆಯದಾಗಿ ಸಮರಸ ಭಕ್ತಿಯನ್ನು ಅಳವಡಿಸಿಕೊಂಡು ಲಿಂಗಾಂಗ ಸಾಮರಸ್ಯದ ಅನುಭವ ಪಡೆಯಬೇಕು. ತ್ವರಿತಗತಿಯಲ್ಲಿ ಆಗದಿದ್ದರೂ ನಿಧಾನವಾಗಿ ಪ್ರಯತ್ನಿಸಿ ಶರಣನು ಷಟಸ್ಥಲವ ಮೀರಿ ನಿರವಯಲ ಸ್ಥಲವನ್ನು ಹೊಂದಬೇಕು. ಎಂದು ಗುರು ಬಸವಣ್ಣನವರು ಸಾಧಕನಿಗೆ ಧೈರ್ಯ ತುಂಬುತ್ತಿದ್ದಾರೆ.

ಕಾಂಡ–3

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ಇವರ ಸಮಗ್ರ ವಚನ ಸಂಪುಟ– "ಬಸವಣ್ಣನವರ ವಚನ ಸಂಪುಟ"ದಿಂದ ಆಯ್ದುಕೊಂಡ ವಚನಗಳು

1380. ಇಷ್ಟಲಿಂಗ ನಿಷ್ಠೆ

ಅಂಗದ ಮೇಲೆ ಲಿಂಗಸಾಹಿತ್ಯವಾದ ಬಳಿಕ
ಸ್ಥಾವರ ದೈವಕ್ಕೆರಗಲಾಗದು
ತನ್ನ ಪುರುಷನ ಬಿಟ್ಟು ಅನ್ಯಪುರುಷನ ಸಂಗ ಸಲ್ಲುವುದೇ?
ಕರಸ್ಥಲದ ದೇವನಿದ್ದಂತೆ
ಧರೆಯ ಮೇಲಣ ಪ್ರತಿಷ್ಠೆಗೆರಗಿದಡೆ
ನರಕದಲ್ಲಿಕ್ಕುವ ಲಿಂಗದೇವಾ.

ಇಷ್ಟಲಿಂಗ ದೀಕ್ಷೆ ಎಂದರೆ ಲಿಂಗಪತಿಯೊಡನೆ ಶರಣ ಸತಿಯ ವಿವಾಹವಿದ್ದಂತೆ. ದೀಕ್ಷೆಯಾದ ಮೇಲೆ ವಿವಾಹವಾದ ಸ್ತ್ರೀ ಹೇಗೆ ತನ್ನ ಪತಿಯನ್ನು ಬಿಟ್ಟು ಅನ್ಯರ ಬಗ್ಗೆ ಕನಸು ಮನಸ್ಸಿನಲ್ಲಿಯೂ ದೃಷ್ಟಿ ಹರಿಸುವುದಿಲ್ಲವೋ ಹಾಗೆ ಅಂಗದ ಮೇಲೆ ಲಿಂಗಸಾಹಿತ್ಯವಾದ ಬಳಿಕ ಬೇರೆ ಸ್ಥಾವರ ದೈವಗಳಿಗೆ ಎರಗಬಾರದು. ಕರಸ್ಥಲದಲ್ಲಿಯೇ ಸೃಷ್ಟಿಕರ್ತ ಲಿಂಗದೇವನ ಕುರುಹು ಇರುವಾಗ ಇದಕ್ಕೆ ಅಗೌರವ ತೋರುವಂತೆ ಭೂಮಿಯ ಮೇಲೆ ಪ್ರತಿಷ್ಠಿಸಲಾದ ಬೇರೆ ದೈವಗಳಿಗೆ ಅಡ್ಡಬಿದ್ದು ನಮಸ್ಕರಿಸಿದರೆ ಲೌಕಿಕ ಪತಿ ಶಿಕ್ಷಿಸುವಂತೆ ಲಿಂಗದೇವನು ಅಂಥ ತತ್ವಭ್ರಷ್ಟನನ್ನು ಶಿಕ್ಷಿಸುವನು.

1381. ಶರಣರು ಕಾಯವಿಡಿದು ನಿರ್ಮಾಯರು

ಅಂಗದಲ್ಲಿ ಅರ್ಪಿತವಾದ ಸುಖವು
ಲಿಂಗದಲ್ಲಿ ಲೀಯವಾಯಿತ್ತೆಂದಡೆ
ಅಂಗವ ಲಿಂಗದಲ್ಲಿ ಮತ್ತೆ ನಿಕ್ಷೇಪಿಸಿಹೆನೆಂಬ
ಕಾರಣವೇಕಯ್ಯಾ ಶರಣಂಗೆ?
ಪ್ರಾಣನ ಲಿಂಗದಲ್ಲಿ ಸವೆಸಿ ನಿರವಯವಾಗಬಹುದಲ್ಲದೆ
ಕರ್ಮದಿಂದಾದ ಕಾಯವ ಸವೆಸಿ ಸಯವಪ್ಪ ಪರಿ ಎಂತು ಹೇಳಯ್ಯಾ?
ಲಿಂಗದೇವಾ, ನಿಮ್ಮ ಶರಣರು ಕಾಯವಿಡಿದಿರ್ದು
ನಿರ್ಮಾಯವಾಗಿರ್ಪುದ ಹೇಳಯ್ಯಾ, ನಿಮ್ಮ ಧರ್ಮ.

ಶರಣನು ಶರೀರದ ಮೂಲಕ ಸ್ವೀಕರಿಸುವ ಸುಖವು ದೇವರಿಗೇ ಅರ್ಪಿತವಾಗುತ್ತದೆ. ಅವನ ಬದುಕೇ ಲಿಂಗಕ್ಕಾಗಿ ಅಂದ ಮೇಲೆ ಇನ್ನು ಏಕೆ ಬದುಕಿರ ಬೇಕು? ಈ ದೇಹವನ್ನು, ಪ್ರಾಣವನ್ನು ವಿಸರ್ಜಿಸಿ ಲಿಂಗದೇವನಲ್ಲಿ ಲೀನವಾಗುವುದು ಒಳ್ಳೆಯದಲ್ಲವೇ ಎಂದು ಕೆಲವರು ವಿಚಾರ ಮಾಡುವರು? ಇದು ತಪ್ಪು. ಪ್ರಾಣದಲ್ಲಿ ಲಿಂಗದೇವರ

ನೆನಹನ್ನು ತುಂಬಿ ಉಸಿರಾಡುತ್ತ ಆಯುಷ್ಯವನ್ನು ಸವೆಸಬಹುದಲ್ಲದೆ ಕರ್ಮದಿಂದಾದ ಶರೀರವನ್ನು ಉಪವಾಸಾದಿ ವ್ರತಗಳಿಂದ ಕ್ಷೀಣಿಸಬಾರದು. ಲಿಂಗದೇವನ ಶರಣರು ಶರೀರ ಹಿಡಿದೂ ಸಹ ನಿರ್ಮಾಯರಾಗಿಪ್ಪರು. ಇಂಥವರನ್ನು ಲಿಂಗದೇವಾ, ನನಗೆ ತೋರಿಸು.

ವೀರ ವಿರಾಗಿಣಿ ಅಕ್ಕಮಹಾದೇವಿ ಚಿಕ್ಕವಯಸ್ಸಿನಲ್ಲಿಯೇ ಇಚ್ಛಾಮರಣಿಯಾಗಿ ಲಿಂಗೈಕ್ಯಳಾಗುವ ಹಂಬಲವನ್ನು ವ್ಯಕ್ತಪಡಿಸುತ್ತಾಳೆ. "ನಾನು ಉಣ್ಣುವುದು, ಉಡುವುದು ಎಲ್ಲವೂ ಲಿಂಗದೇವನಿಗಾಗಿ. ಈ ಕಾಯವನ್ನು ವಿಸರ್ಜಿಸಿ ದೇವನಿಗೆ ಪೂರ್ಣವಾಗಿ ಸಮರ್ಪಣೆಯಾಗಿ ಬಿಡಬಹುದಲ್ಲ." ಎಂದು ಹೇಳಿದಾಗ, ಬಹುಶಃ ಗುರು ಬಸವಣ್ಣನವರು ಮೇಲಿನ ವಚನವನ್ನು ಹೇಳಿರಬಹುದು.

1382. ಭೂಮಿಯ ಅಳತೆ

ಅಂಗುಲ ಹನ್ನೆರಡು ಕೂಡಲು ಒಂದು ಗೇಣು,
ಗೇಣು ಎರಡು ಕೂಡಲು ಒಂದು ಮೊಳ,
ಮೊಳವೆರಡು ಕೂಡಲು ಒಂದು ಹಸ್ತ
ಹಸ್ತವೆರಡು ಕೂಡಲು ಒಂದು ಮಾರು
ಮಾರೆರಡು ಕೂಡಲು ಒಂದು ಜಂಘೆ
ಜಂಘೆ ಏಳನೂರೆಪ್ಪತ್ತು ಕೂಡಲು ಒಂದು ಪಾದಚ್ಛಯ
ಪಾದಚ್ಛಯವೆರಡು ಸಾವಿರಡೆಂಟುನೂರು ಕೂಡಲು ಒಂದು
ಕೂಗಳತೆ,
ಕೂಗಳತೆ ನಾಲ್ಕು ಕೂಡಲು ಒಂದು ಯೋಜನೆ
ಅಂಥ ಯೋಜನ ನಾಲ್ಕು ಚೌಕಕ್ಕು ಹನ್ನೆರಡು ಹನ್ನೆರಡು ಕೂಡಲು
ಬಳಸಿ ನಾಲ್ವತ್ತೆಂಟು ಯೋಜನ ಪ್ರಮಾಣಿನ ಕಟ್ಟಳೆಯಾಯಿತ್ತು.
ಇಂತಪ್ಪ ಕಟ್ಟಳೆಯಾಗಿದ್ದ ಕಲ್ಯಾಣದೊಳಗಿರುವ ಗಣಂಗಳೆಲ್ಲರನ್ನೂ
ಲಿಂಗದೇವಾ, ನಿಮ್ಮೊಳು ಕಂಡು ಸುಖಿಯಾಗಿರ್ದೇನೆ.

ಅಂದಿನ ಕಾಲದಲ್ಲಿ ಉದ್ದಗಲಗಳನ್ನು ಅಳತೆ ಮಾಡಲು ಈ ಮಾಪನವನ್ನು ಬಳಸಲಾಗುತ್ತಿತ್ತು ಎಂದು ಕಾಣುತ್ತದೆ. ಈ ವಚನಕ್ಕೆ ಪ್ರತ್ಯೇಕ ವ್ಯಾಖ್ಯಾನ ಬೇಕಾಗಿಲ್ಲ, ಒಟ್ಟಾರೆ ಸಾರಾಂಶವೆಂದರೆ ಕಲ್ಯಾಣ ಪಟ್ಟಣ ನಾಲ್ವತ್ತೆಂಟು ಯೋಜನ ಪ್ರಮಾಣದ್ದಾಗಿತ್ತು. ಇಡೀ ನಗರದ ತುಂಬ ಶರಣರು ನೆಲೆಸಿದ್ದರು.

1383. ಶರಣರನುಭಾವ ಬಹು ಮುಖ್ಯ

ಅನಂತಕಾಲ ತರು, ಗಿರಿಗಳ ಹೊಕ್ಕು ತಪವ ಮಾಡುವುದರಿಂದ
ಒಂದು ದಿನ ಲಿಂಗಪೂಜೆ ಸಾಲದೆ?
ಅನಂತಕಾಲ ಲಿಂಗಪೂಜೆಯ ಮಾಡುವುದರಿಂದ
ಒಂದು ದಿನ ಗುರುಚರಣದ ಸೇವೆ ಸಾಲದೆ?
ಅನಂತಕಾಲ ಗುರುಚರಣದ ಸೇವೆಯ ಮಾಡುವುದರಿಂದ
ಒಂದು ದಿನ ಜಂಗಮಕ್ಕೆ ತೃಪ್ತಿಯ ಮಾಡುವುದು ಸಾಲದೆ?
ಅನಂತಕಾಲ ಜಂಗಮಕ್ಕೆ ತೃಪ್ತಿ ಮಾಡುವುದರಿಂದ
ಒಂದು ನಿಮಿಷ ನಿಮ್ಮ ಶರಣರನುಭಾವ ಸಾಲದೆ?
ಲಿಂಗದೇವಾ.

ಬಹುದೀರ್ಘಕಾಲ ಕಾಡು ಬೆಟ್ಟಗಳನ್ನು ಹೊಕ್ಕು ತಪಸ್ಸು ಮಾಡುವುದಕ್ಕಿಂತಲೂ ಒಂದು ದಿವಸ ಇಷ್ಟಲಿಂಗದೇವನ ಪೂಜಿಸುವುದು ಬಹು ಶ್ರೇಷ್ಠ. ಅನಂತಕಾಲ ಲಿಂಗಪೂಜೆ ಮಾಡುವುದಕ್ಕಿಂತಲೂ ಒಂದು ದಿನ ಗುರುವಿನ ಸೇವೆ ಶ್ರೇಷ್ಠವಾದುದು. ಅನಂತಕಾಲ ಗುರು ಸೇವೆ ಮಾಡುವುದಕ್ಕಿಂತಲೂ ಒಂದು ದಿನ ಜಂಗಮತೃಪ್ತಿ ಮಾಡುವುದು ಶ್ರೇಷ್ಠ. ಅನಂತಕಾಲ ಜಂಗಮ ತೃಪ್ತಿ ಮಾಡುವುದಕ್ಕಿಂತಲೂ ಒಂದು ನಿಮಿಷ ಶರಣರ ಸಂಗದಲ್ಲಿ ಸೇರಿ ಅನುಭಾವವ ಮಾಡುವುದು ಎಲ್ಲಕ್ಕೂ ಶ್ರೇಷ್ಠ.

ಶರಣರ ಸಂಗ ಬಹಳ ಅಮೂಲ್ಯ ತಿದ್ದುವುದು, ತೀಡುವುದು, ವ್ಯಕ್ತಿಯನ್ನು ಪರಿಪೂರ್ಣಗೊಳಿಸುವುದು. ಗುರು ಸೇವೆ, ಲಿಂಗಪೂಜೆ, ಜಂಗಮ ತೃಪ್ತಿ ಇವನ್ನು ಬಿಟ್ಟು ಶರಣರ ಅನುಭಾವ ಮಾಡಬೇಕೆಂದಿಲ್ಲ. ಇವೆಲ್ಲವನ್ನು ಮಾಡಿಯೂ ಶರಣರ ಒಡನಾಟ ಇಲ್ಲದಿದ್ದರೆ ಇವು ಅರ್ಥವನ್ನು ಕಳೆದುಕೊಳ್ಳುವ ಕಾರಣ ಈ ತ್ರಿವಿಧ ಕ್ರಿಯೆ ಮಾಡುತ್ತಲೇ ಶರಣರ ಒಡನಾಟ ಮಾಡಬೇಕು ಎಂದು ಅರ್ಥ.

1384. ಶರಣ ಪ್ರೇಮಿ ಬಸವಣ್ಣ

ಅಯ್ಯಾ, ನಿಮ್ಮ ಶರಣರ ಕಂಡರೆ ಕಡುಸುಖವೆನಗಯ್ಯಾ
ಕಾಣದಿರೆ ಅವಸ್ಥೆ ನೋಡಯ್ಯಾ
ತವಕದ ಸ್ನೇಹ ದರುಶನದಲಿ ತರಹರವಾಯಿತ್ತು.
ಲಿಂಗದೇವಾ, ನಿಮ್ಮ ಶರಣರ ಶ್ರೀಪಾದವ ಕಂಡು ಧನ್ಯನಾದೆನು.

ಗುರು ಬಸವಣ್ಣನವರಿಗೆ ಶರಣರನ್ನು ಕಂಡರೆ ಕಡುಪ್ರೇಮ. ಶರಣರ ಬರವಿಗಾಗಿ ಹಂಬಲಿಸುತ್ತಿದ್ದರು. ಅದನ್ನೇ ಈ ವಚನದಲ್ಲಿ ವಿವರಿಸಿದ್ದಾರೆ.

"ಲಿಂಗದೇವಾ, ನಿಮಗೊಲಿದ ಶರಣರನ್ನು ಕಂಡರೆ ಪರಮ ಆನಂದವಾಗುತ್ತದೆ. ಹೊಸಬರಾರೂ ಬರದಿದ್ದರೆ, ಹಳಬರಾರಾದರೂ ಕಾಣದಂತಾದರೆ ತುಂಬಾ ವ್ಯಾಕುಲತೆ ಉಂಟಾಗುತ್ತದೆ. ಉತ್ಕಟವಾದ ಸ್ನೇಹ ಪರಸ್ಪರ ದರ್ಶನವಾದಾಗ ತೃಪ್ತಿಗೊಳ್ಳುತ್ತದೆ. ಶರಣರನ್ನು ಕಂಡಾಗ ಧನ್ಯತಾಭಾವ ಉಂಟಾಗುತ್ತದೆ."

1385. ದೇವನ ಪರೀಕ್ಷೆ

ಅಯ್ಯಾ, ನೀ ಒಲಿದಡೆ ತಿರಿವಂತೆ ಮಾಡುವಿರಿ
ತಿರಿದಡೆ ನೀಡದಂತೆ ಮಾಡುವಿರಿ
ನೀಡಿದಡೆ ನೆಲಕ್ಕೆ ಬೀಳುವಂತೆ ಮಾಡುವಿರಿ
ಬಿದ್ದಡೆ ನಾಯಿ ತಿಂಬಂತೆ ಮಾಡುವಿರಿ
ನಿಮ್ಮ ಧ್ಯಾನದಲ್ಲಿ ನಾನಿಪ್ಪಂತೆ ಮಾಡುವಿರಿ ಲಿಂಗದೇವಾ.

"ಲಿಂಗದೇವಾ, ನಿಮ್ಮ ಕೃಪಾದೃಷ್ಟಿ ಬಿದ್ದಡೆ ಸಂಕಷ್ಟಗಳೇ ಜಾಸ್ತಿ, ನಿಮ್ಮ ಪ್ರೀತಿಯು ನಿಜಕ್ಕೂ ಘೋರ. ನೀವು ಒಲಿದಡೆ ಭಿಕ್ಷೆ ಬೇಡುವಂತೆ ಮಾಡುತ್ತೀರಿ. ಭಿಕ್ಷೆ ಬೇಡಿದರೆ ಯಾರೂ ನೀಡದಂತೆ ಮಾಡುವಿರಿ. ಯಾರಾದರೂ ನೀಡಿದಡೆ ನೆಲಕ್ಕೆ ಬೀಳುವಂತೆ ಮಾಡುತ್ತೀರಿ. ಹಸಿವೆಯನ್ನು ತಾಳಲಾರದೆ ಅದನ್ನೇ ಎತ್ತಿಕೊಳ್ಳೋಣ ಎಂದುಕೊಳ್ಳುವಾಗಲೇ ನಾಯಿ ಅದನ್ನು ತಿನ್ನುವಂತೆ ಮಾಡುವಿರಿ. ಹೀಗೆ ಮಾಡಿ ನಿಮ್ಮ ಧ್ಯಾನದಲ್ಲಿ ನಾನಿರುವಂತೆ ಮಾಡುತ್ತೀರಿ."

1386. ದೇವಾ, ನೀನೆಂಥಾ ನಿಷ್ಕರುಣಿ!

ಅಯ್ಯಾ, ನೀ ಒಲಿದಡೆ
ಹುಚ್ಚನೆಂದೆನಿಸಿ ಕಲ್ಲಲಿಡಿಸಿ

ಎಲ್ಲರ ಕೈಯಲು ಸುಡಿಸಿ
ನಿನ್ನ ನಚ್ಚಿದವರನ್ನೆಲ್ಲ ಬಡಿಸು, ಲಿಂಗದೇವಾ

ದೇವಾ, ನಿನ್ನ ನಡೆಯೇ ವಿಚಿತ್ರ, ಲೌಕಿಕದಲ್ಲಿ ಜನರು ಮನಸ್ವೇಚ್ಛೆ ಬದುಕುತ್ತಾರೆ. ಅವರ ತಂಟೆಗೆ ಜಗತ್ತು ಹೋಗದು. ಆದರೆ, ನಿನಗೊಲಿದವರ ಕುರಿತು ವಿಲಕ್ಷಣವಾಗಿ ಜನರು ವರ್ತಿಸುವರು. ಭಕ್ತರನ್ನು ಹುಚ್ಚರೆಂದು ಕಂಡು ಕಲ್ಲಲ್ಲಿ ಹೊಡೆಯುವರು, ಎಲ್ಲರ ಕೈಯಲ್ಲಿ ನಿಂದೆಗೊಳಗು ಮಾಡುವರು; ದೆವ್ವ ಬಡಿದವರೆಂದು ಸುಡಿಸುವರು, ಲೌಕಿಕರಂತೆ ನಡೆಯುವುದಿಲ್ಲ ಎಂದು ಬಡಿಸುವರು. ನೀನೆಂಥಾ ನಿಷ್ಕರುಣಿ! ಹೀಗೇಕೆ ಭಕ್ತರನ್ನು ಪರೀಕ್ಷಿಸುತ್ತೀಯೆ?

1387. ನಿರ್ಗುಣ ಪೂಜೆ ಅಗತ್ಯ

ಅಷ್ಟವಿಧಾರ್ಚನೆ ಅರಸರಿಯದ ಬಿಟ್ಟಿ ಕಾಣಿರೋ
ಸಗುಣ ನಿರ್ಗುಣ ಸ್ಥೂಲ, ಸೂಕ್ಷ್ಮ
ಅವು ನಿಜವನರಿವವೆ? ಅವು ತಮ್ಮ ತಾವರಿಯವು.
ಅವ ಭಿನ್ನವೆಂದರಸಲುಂಟೆ ಲಿಂಗದೇವಾ?

ಯಾಂತ್ರಿಕವಾಗಿ ಮಾಡುವ ಅಷ್ಟವಿಧಾರ್ಚನೆಯು ಅರಸರಿಯದ ಬಿಟ್ಟಿ ಸೇವೆ. ಕೆಲವು ಸಲ ಕೆಲವು ಮಧ್ಯವರ್ತಿಗಳು ಅರಸರ ಆಜ್ಞೆ ಎಂದು ಬಿಟ್ಟಿ ಕೆಲಸ ಮಾಡಿಸುವರು. ಇವರು ಮಾಡಿದ ಬಿಟ್ಟಿ ಕೆಲಸ ಅರಸರ ಗಮನಕ್ಕೆ ಬರದು, ಹಾಗೆ ಯಾಂತ್ರಿಕವಾಗಿ ಮಾಡುವ ಪೂಜಾ ಕ್ರಿಯೆ ದೇವರೆಂಬ ಅರಸನ ಗಮನಕ್ಕೆ ಬಾರದ ಬಿಟ್ಟಿ ಕೆಲಸ. ಇದರಲ್ಲಿ ಸಗುಣ ನಿರ್ಗುಣ ಎಂಬ ಎರಡು ಬಗೆಗಳುಂಟು. ಸಗುಣವಿರುವುದು ಸ್ಥೂಲ, ನಿರ್ಗುಣವಿರುವುದು ಸೂಕ್ಷ್ಮ. ಅಷ್ಟವಿಧಾರ್ಚನೆಯಲ್ಲಿ ಬಳಸುವ ನೀರು, ಭಸ್ಮ, ಹೂವು-ಪತ್ರೆ, ಧೂಪ-ದೀಪ ಮುಂತಾದವು ಕೇವಲ ಸಾಧನಗಳೇ ವಿನಾ ಸಿದ್ಧಿಯಲ್ಲ. ಅವಕ್ಕೆ ತಾವು ದೇವರಿಗೆ ಸಮರ್ಪಿತವಾಗುತ್ತಿದ್ದೇವೆ ಎಂಬ ಅರಿವು ಸಹ ಇಲ್ಲ. ಆದ್ದರಿಂದ ನಿರಾಕಾರವೂ ನಿರ್ಗುಣವೂ ಆದ ಪೂಜೆ ಸರ್ವಶ್ರೇಷ್ಠ.

1388. ಇಷ್ಟಲಿಂಗದ ಆವಶ್ಯಕತೆ

ಆತ್ಮವೇ ಲಿಂಗವೆಂಬುರು, ಆತ್ಮನ ದೇಹರಹಿತವಾಗಿ ಕಾಬವರುಂಟೆ?
ಪ್ರಾಣವೇ ಲಿಂಗವೆಂಬರು,
ಪ್ರಾಣವನು ಕಾಯವ ಬಿಟ್ಟು ಬೇರೆ ಕಾಣಬಹುದೆ?
ಕಂಡೆಹೆನೆಂದಡೆ ಅದು ನಿರವಯ, ನಿರಾಕಾರವಾದುದು,
ಭಾವಕ್ಕೆ ಬಾರದು.
ಭಾವಕ್ಕೆ ಬಾರದುದ ಪೂಜಿಸಬಹುದೆ?
ಅದು ಕಾರಣ, ಕಾಯದ ಕರಸ್ಥಲದಲ್ಲಿ ಕ್ರಿಯಾಲಿಂಗವಿಡಿದು ನೋಡಲು
ಪ್ರಾಣ ಆತ್ಮನೆಂಬವು ಬೇರಿಲ್ಲ.
ಇದು ಕಾರಣ, ಇಷ್ಟವ ಬಿಟ್ಟು ಬಟ್ಟಬಯಲೆ ವಸ್ತುವೆಂಬ
ಮಿಟ್ಟಿಯ ಭಂಡರ ನಮ್ಮ ಲಿಂಗದೇವನ ಶರಣರು ಮೆಚ್ಚರು.

ದೇಹದಲ್ಲಿ ದೇವನ ಅಂಶ ಯಾವುದು? ಆತ್ಮ! ನಿಜ, ಆದರೆ ಆತ್ಮನನ್ನು ದೇಹದ ಆಶ್ರಯವಿಲ್ಲದೆ ಕಾಣಲಿಕ್ಕೆ ಸಾಧ್ಯವೇ? ದೇಹದಲ್ಲಿ ಪ್ರಾಣವೇ ಮುಖ್ಯ(ಲಿಂಗ)ಎನ್ನುವರು ಕೆಲವರು. ದೇಹದ ಆಶ್ರಯವಿಲ್ಲದೆ ಪ್ರಾಣವನ್ನು ಕಾಣಲು ಸಾಧ್ಯವೆ? ಕಾಣಬೇಕೆಂದರೆ ಆತ್ಮವಾಗಲೀ ಪ್ರಾಣವಾಗಲಿ ನಿರವಯ, ನಿರಾಕಾರ. ಆದ್ದರಿಂದ ಪೂಜಿಸಲು ಸಾಧ್ಯವಿಲ್ಲ.

ಕಾಯದ ಕರಸ್ಥಲದಲ್ಲಿ ಇಷ್ಟಲಿಂಗವನ್ನು ಹಿಡಿದು ನೋಡಲು ಪ್ರಾಣ, ಆತ್ಮಗಳ ಅನುಭವ ಉಂಟಾಗುವುದು. ಪ್ರಕೃತಿಯಲ್ಲಿ ಕಾಣುವ ಬಟ್ಟ ಬಯಲನ್ನೇ ದೇವರು (ವಸ್ತು) ಎನ್ನುವ ಭಂಡರುಗಳನ್ನು ನಮ್ಮ ಶರಣರು ಮೆಚ್ಚರು. ಲಿಂಗದೇವರು ಜಡವಾದ ಪ್ರಕೃತಿಯಲ್ಲ. ಚೈತನ್ಯಮಯವಾದ ಪರಿಪೂರ್ಣ ಬಯಲು.

1389. ನಿಂದಕರೆಂಬ ಶ್ವಾನಗಳು

ಊರೊಳಗೆ ಹೊಸಬರು ಬಂದಡೆ
ಪುರದೊಳಗಣ ಶ್ವಾನ ನೋಡಿ ಬಗುಳದೆ ಸುಮ್ಮನೆ ಬಿಡುವುದೆ?
ಊರಿಗೆ ಹೊರಗಾದ ಶರಣರು ಊರುಗಳ ಮಧ್ಯದೊಳಿರಲು
ದೂಷಕರು ದೂಷಿಸದಿಪ್ಪರೇ ಅಯ್ಯ?
ದೂಷಕರ ಧೂಮಕೇತುಗಳು ನಿಮ್ಮ ಶರಣರು, ಲಿಂಗದೇವಾ.

ಊರಿನೊಳಕ್ಕೆ ಹೊಸಬರು ಬಂದರೆ ಊರೊಳಗಣ ನಾಯಿಗಳು ಸಿಕ್ಕಾಪಟ್ಟೆ ಬೊಗಳುವವು. ಅದೇ ರೀತಿ ಲೌಕಿಕ ನಡೆ-ನುಡಿ ಇರದ ಶರಣರನ್ನು ಕಂಡರೆ ದೂಷಕರು ಎಂಬ ನಾಯಿಗಳು ಸಿಕ್ಕಾಪಟ್ಟೆ ನಿಂದಿಸುವರು. ಶರಣರು ದೂಷಕರಿಗೆ ಹೆದರದ ಧೂಮ ಕೇತುಗಳಂತೆ, ದೂಷಕರನ್ನು ಸ್ಥಿತಪ್ರಜ್ಞತೆಯಿಂದ ಎದುರಿಸುವರು.

1390. ದೇವನ ನೆನಹು

ಎತ್ತ ನೋಡಿದೊಡತ್ತ ನಿಮ್ಮ ತೇಜವನೇ ಕಾಬೆನಲ್ಲದೆ
ಮತ್ತೊಂದ ಕಾಣೆ,
ಎನ್ನ ಚಿತ್ತ ನೋವಲ್ಲಿ ನೊಂದಲ್ಲಿ ನೆನೆವಲ್ಲಿ ನೀನೇ ಇಪ್ಪೆಯಾಗಿ
ಬೆಳಗಿರಲು ಕತ್ತಲೆಯುಂಟೆ ಲಿಂಗದೇವಾ?

"ಲಿಂಗದೇವಾ, ಎಲ್ಲಿ ನೋಡಿದರೆ ಅಲ್ಲಿ ನಿಮ್ಮ ಬೆಳಕನ್ನೇ ಕಾಣುವೆನಲ್ಲದೆ ಬೇರೆ ಕಾಣೆ, ನನ್ನ ಚಿತ್ತ-ಮನಸ್ಸುಗಳು ನೊಂದರೆ ಅಲ್ಲಿ ನೀನಿರುವೆ; ನಾನು ನೆನೆವಲ್ಲಿ ನೀನಿರುವೆ. ಬೆಳಕಿದ್ದಲ್ಲಿ ಕತ್ತಲೆ ಹೇಗೆ ಇರದೋ ಹಾಗೆ ನೀನಿದ್ದಲ್ಲಿ ನೋವು ಇರದು. ನಿನ್ನ ನೆನಹು ನನ್ನ ಇರುವಿಕೆ ಎಲ್ಲವನ್ನೂ ದೈವೀಕರಣ, ಆನಂದಮಯಗೊಳಿಸುವುದು."

1391. ಮಾಚಿತಂದೆಗೆ ನಮೋ ನಮೋ

ಎನ್ನ ಕಾಯದ ಕರಸ್ಥಲದಲ್ಲಿ ಪ್ರಭುದೇವರ ಕಂಡೆನು
ಎನ್ನ ಪ್ರಾಣದ ಕರಸ್ಥಲದಲ್ಲಿ ಚನ್ನಬಸವಣ್ಣನ ಕಂಡೆನು
ಎನ್ನ ಸರ್ವಾಂಗದ ಕರಸ್ಥಲದಲ್ಲಿ ಮಡಿವಾಳನ ಕಂಡೆನು
ಸಂಗನೋ ಮಡಿವಾಳನೊ ಎಂದು ನುಡಿಯಲರಿಯೆ
ಎನ್ನೊಡಲ ಗುಣಂಗಳ ಕೆಡಿಸಿ ಕಡೆಯ ಕಾಣಿಸಿದ
ಎನ್ನನುಳುಹಿದ ಪರಮಯೋಗಿ ಲಿಂಗದೇವಾ,
ಮಡಿವಾಳ ಮಾಚಿತಂದೆಗಳ ಪಾದಕ್ಕೆ
ನಮೋ ನಮೋ ಎಂಬೆನು

ನನ್ನ ಕಾಯದ ಕರಸ್ಥಲವಾದ ಇಷ್ಟಲಿಂಗದಲ್ಲಿ ಪ್ರಭುದೇವರನ್ನು ದರ್ಶಿಸಿದೆ. ಎನ್ನ ಪ್ರಾಣದ ಕರಸ್ಥಲವಾದ ಮನಸ್ಸಿನಲ್ಲಿ ಚನ್ನಬಸವಣ್ಣನನ್ನು ದರ್ಶಿಸಿದೆ. ನನ್ನ ಸರ್ವಾಂಗದಲ್ಲಿಯೂ ಮಡಿವಾಳ ಮಾಚಿದೇವರನ್ನು ತುಂಬಿಕೊಂಡಿದ್ದೇನೆ. ಮಡಿವಾಳ ಮಾಚಿದೇವರು ನನ್ನನ್ನು ತಿದ್ದುವವರು. ಒಡಲ ಗುಣಗಳನ್ನು ಅಳಿಸುವವರು. ನನ್ನನ್ನು ರಕ್ಷಿಸುವ ಪರಮಯೋಗಿ. ಇಂಥ ಮಡಿವಾಳ ಮಾಚಿತಂದೆಗಳಿಗೆ ನಮೋ ನಮೋ ಎನ್ನುತ್ತೇನೆ.

1392. ದೇವರೇ ಬಸವಣ್ಣನವರ ಗುರು

ಎನ್ನ ಗುರು ಪರಮಗುರು ನೀವೆ ಕಂಡಯ್ಯ
ಎನ್ನ ಗತಿಮತಿ ನೀನೆ ಕಂಡಯ್ಯ
ಎನ್ನ ಅರಿವಿನ ಜ್ಯೋತಿ ನೀವೆ ಕಂಡಯ್ಯ
ಎನ್ನಂತರಂಗ ಬಹಿರಂಗದ ಮಹವು ನೀವೆ ಕಂಡಯ್ಯ
ಲಿಂಗದೇವಾ ನೀವೆನಗೆ ಗುರು, ನಾ ನಿಮಗೆ ಶಿಷ್ಯನೆಂಬುದನು
ನಿಮ್ಮ ಶರಣ ಸಿದ್ಧರಾಮಯ್ಯದೇವರೆ ಬಲ್ಲರು.

ಈ ವಚನ ಎರಡನೆಯ ಸಲ ಬಂದಿದೆ. ಇದರಲ್ಲಿ ಒಂದು ವಾಕ್ಯ ಹೆಚ್ಚಾಗಿ ಇರುವ ಕಾರಣ ಪುನಃ ಇದನ್ನು ಕೊಡಲಾಗಿದೆ.

ದೇವರು ನೇರವಾಗಿ ಅನುಗ್ರಹಿಸಿ ಗುರು ಬಸವಣ್ಣನವರಿಗೆ ಗುರುವಾಗಿದ್ದಾನೆ. ಮಾತ್ರವಲ್ಲ ಜಗತ್ತಿನ ಎಲ್ಲ ಗುರುಗಳಿಗೂ ಗುರುವಾದ ಪರಮಗುರುವು ಆಗಿದ್ದಾನೆ. "ಎನ್ನ ಗುರು ಮತ್ತು ಪರಮಗುರು ನೀನೇ ಆಗಿದ್ದೀಯ. ನನ್ನ ಮುಂದಣ ಗತಿ ಮತ್ತು ನನಗೆ ದಾರಿ ತೋರುವ ಬುದ್ಧಿ (ಮತಿ) ನೀನೆ ಕಂಡಯ್ಯ. ಎನ್ನ ಅಂತರಂಗ ಬಹಿರಂಗಳನ್ನು ವ್ಯಾಪಿಸಿಕೊಂಡ ಮಹವು ನೀನೆ ಆಗಿದ್ದೀಯ. ಲಿಂಗದೇವಾ, ನನಗೆ ಯಾರೂ ವ್ಯಕ್ತಿ ಗುರುವಿಲ್ಲ. ನೀವೇ ನನಗೆ ಗುರು, ನಾನು ನಿಮಗೆ ಶಿಷ್ಯ ಎಂಬುದನ್ನು ನಿಮ್ಮ ಶರಣ ಸಿದ್ಧರಾಮಯ್ಯನವರೇ ಬಲ್ಲರು."

1393. ಪ್ರಭುವಿನ ಲಿಂಗೈಕ್ಯ

ಎನ್ನನುಭಾವದ ಗಮ್ಯವೆ, ಎನ್ನರುಹಿನ ವಿಶ್ರಾಮವೆ,
ಎನ್ನ ಭಾವದ ಬಯಕೆಯೆ, ಎನ್ನ ನಿಜದ ನಿಲವೆ
ಎನ್ನ ಪರಿಣಾಮದ ಮೇರುವೆ
ಎನ್ನ ಘನದ ನಿಲವೆ,
ನಿಮ್ಮ ಸುಳುಹು ಎತ್ತಲಡಗಿತ್ತೊ?
ನಿಮ್ಮ ನಾಮ ನಿರ್ನಾಮವಾಯಿತ್ತೆ?
ಎಲೆ ಪರಮಗುರುವೆ
ಲಿಂಗದೇವಯ್ಯನಲ್ಲಿ ಉರಿಯುಂಡ
ಕರ್ಪುರದಂತಾದೆಯಲ್ಲ, ಪ್ರಭುವೆ.

ಅಲ್ಲಮಪ್ರಭುದೇವರೇ, ನೀವು ಎನ್ನ ಅನುಭಾವದ ಗಮ್ಯ. ಅರುಹಿನ ವಿಶ್ರಾಮ, ಭಾವದ ಬಯಕೆ, ನಿಜದ ನಿಲುವು, ಎನ್ನ ತೃಪ್ತಿಯ ಮೇರು, ಘನವಾದ ನಿಲುವು ನಿಮ್ಮ ಚಟುವಟಿಕೆ ಎತ್ತಲಡಗಿತ್ತು? ಶರೀರಧಾರಿಯಾದ ನಿಮಗೆ ಅಲ್ಲಮಪ್ರಭುವೆಂಬ ನಾಮವಿತ್ತು. ಈಗ ನೀವು ನಿರ್ದೇಹಿಯಾದಿರಿ. ಲಿಂಗದೇವನಲ್ಲಿ ಉರಿಯುಂಡ ಕರ್ಪುರದಂತೆ ಅಡಗಿ ಹೋದೆಯಲ್ಲ ಪ್ರಭುವೆ!

1394 ಭಕ್ತ – ಜಂಗಮ ಸಂಬಂಧ

ಒಡಲಿಲ್ಲದ ಭಕ್ತನ ಪರಿಯ ನೋಡಾ
ಮನ ಪ್ರಾಣ ಮುಕ್ತ, ಭವರಹಿತಜಂಗಮದ ಪರಿಯನೋಡಾ
ಸಿಡಿಲ ಮಿಂಚಿನ ಬೆಳಗನೊಂದೆಡೆಯಲ್ಲಿ ಹಿಡಿಯಲುಂಟೆ?
ಉಭಯ ಒಂದಾದವರ ಕಂಡಡೆ,
ನೀವೆಂಬೆ ಲಿಂಗದೇವಾ

ಭಕ್ತ ಶ್ರಮ ಜೀವಿ. ಅವನ ಶರೀರಕ್ಕೆ ದಣಿವು ಇದೆಯೋ ಇಲ್ಲವೋ ಎಂಬಂತೆ ಪರಿಶ್ರಮ ಪಡುತ್ತಾನೆ. ಜಂಗಮ ಯೋಗಜೀವಿ. ಮನ ಗುಣ, ಪ್ರಾಣ ಗುಣಗಳಿಂದ ಮುಕ್ತನಾಗಿ ಭವ ರಹಿತನಾಗಿದ್ದಾನೆ. ಸಿಡಿಲು, ಮಿಂಚಿನ ಬೆಳಕನ್ನು ಹೇಗೆ ಒಂದೆಡೆ ಹಿಡಿದಿಡಲು ಸಾಧ್ಯವಿಲ್ಲವೋ ಅದೇ ರೀತಿ ಭಕ್ತ, ಜಂಗಮರ ನಿಲುವು ವರ್ಣಿಸಲು ಅಸಾಧ್ಯ. ಜ್ಞಾನಿಯಾದ ಜಂಗಮ ಪರಿಶ್ರಮ ಜೀವಿಯಾದ ಭಕ್ತ ಇಬ್ಬರ ಜೋಡಿ ಅಪ್ರತಿಮ.

1395. ದೇವರ ಲಿಖಿತ

ಕಡಿಯೆ ಕುಳ್ಳಿರಿಸಿ
ಕತ್ತಿಯನೆತ್ತಿ ತಲೆಯ ಹೊಡೆಯೆ ಬದುಕಿದವರುಂಟು!
ಕಡಲ ನಡುವೆ ಹಡಗೊಡೆದು
ಹಲಗೆಯ ಹಿಡಿದು ತಡಿಗೆ ಸೇರಿ ಬದುಕಿದವರು ಉಂಟು!
ಎನ್ನೊಡೆಯ ಲಿಂಗದೇವ
ಬರೆದ ಬರಹವ ತೊಡೆಯಬಲ್ಲರೆ
ಹರಿಸುರ ಬ್ರಹ್ಮಾದಿಗಳು?

ಕಡಿಯ ಬೇಕೆಂದು ಕುಳ್ಳಿರಿಸಿ ಕತ್ತಿಯನೆತ್ತಿ ತಲೆಯ ಮೇಲೆ ಹೊಡೆದಾಗ ತಪ್ಪಿಸಿಕೊಂಡು ಬದುಕಿದವರುಂಟು. ಸಮುದ್ರದ ನಡುವೆ ಹಡಗು ಒಡೆದು ಹಲಗೆಯನ್ನು ಹಿಡಿದುಕೊಂಡು ದಡವ ಸೇರಿದವರುಂಟು. ಆದರೆ ಪರಮಾತ್ಮ ಲಿಂಗದೇವನು ಬರೆದ ಬರಹವನ್ನು ಹರಿ ಸುರ ಬ್ರಹ್ಮಾದಿಗಳು ತಪ್ಪಿಸಿಕೊಳ್ಳಲಾರರು.

1396. ಕುಬುದ್ಧಿಯವರಿಗೆ ಉಪದೇಶ ಹಿಡಿಸುವುದೆ?

ಕತ್ತೆಯ ಕರವೆತ್ತಿ ಕರೆದಡೆ
ಅದೆತ್ತಣ ವಾರ್ತೆಯೆಂದು ಬಲ್ಲುದು?
ಕುಬುದ್ಧಿಯುಳ್ಳವರಿಗೆ ಸುಬುದ್ಧಿಯ ಹೇಳಿದಡೆ
ಕುಬುದ್ಧಿ ಮಾಣ್ಬುದೆ ಲಿಂಗದೇವಾ?

ಒಂದೆಡೆ ದೂರದಲ್ಲಿ ಕತ್ತೆಯೊಂದು ನಿಂತಿರುತ್ತದೆ ಎಂದುಕೊಳ್ಳುವ. ನಾವು ಅನತಿ ದೂರದಲ್ಲಿ ನಿಂತು ಕೈಸನ್ನೆ ಮಾಡಿ ಕರೆದರೆ ಅದಕ್ಕೆ ತಿಳಿಯುವುದೆ? ಅದು ಕೈಸನ್ನೆಯ ಕರೆಯುವಿಕೆಯನ್ನು ಅರ್ಥಮಾಡಿಕೊಳ್ಳಬಲ್ಲುದೆ? ಅದೇ ರೀತಿ ಕೆಟ್ಟ ಗುಣ, ದುಶ್ಚಟ ಮುಂತಾಗಿ ಇರುವವರಿಗೆ ಒಳ್ಳೆಯ ಹಿತೋಪದೇಶ ಮಾಡಿದರೆ ಅವರಿಗೆ ಅರ್ಥವಾಗುವುದಿಲ್ಲ ಅವರ ಕುಬುದ್ಧಿ ತೊಲಗುವುದಿಲ್ಲ.

1397. ದೇವರಿಗೆ ಶರಣಾಗಬೇಕು.

ಕಾಯದ ಕಳವಳದಲ್ಲಿ ಹುಟ್ಟಿ ಲಿಂಗವನರಿಯದಂತವರಿರಲಿ
ಷಡು ಶಾಸ್ತ್ರಾಗಮಪುರಾಣದರ್ಥವನೋದಿ
ಲಿಂಗ ಉಂಟು, ಇಲ್ಲೆಂಬ ಅಜ್ಞಾನಿಗಳಂತಿರಲಿ,
ಷಡುಶೈವರು ಹಂಚಾಗಿ ಹೋದರು
ಎಂತು ನಿಜಲಿಂಗವಂತಂಗೆ ಸರಿಯೆಂಬೆ?
ಅದ್ವೈತಿಗಳೆಲ್ಲಾ ಲಿಂಗಾರಾಧನೆ ಹುಸಿಯೆಂದು
ಬುದ್ಧಿತಪ್ಪಿ ಕ್ರಮಗೆಟ್ಟು ಹೋದರು.
ಬ್ರಹ್ಮ ನಾನೆಂದು ಶಿರವ ಹೋಗಾಡಿಸಿಕೊಂಡನು,
ಬ್ರಹ್ಮಾದಿದೇವತೆಗಳು ಮಹಾಲಿಂಗಕ್ಕೆ ದೂರವಾಗಿ ಹೋದರು.

ಹಮ್ಮಿಲ್ಲದ ಕಾರಣ
ಲಿಂಗದೇವನ ಶರಣರು ಜಗವಂದ್ಯರಾದರು.

ಶರೀರದ ಕೋಟಲೆಗಳನ್ನು ಒಳಗೊಂಡು ಹುಟ್ಟಿದ ಮಾನವರು ಅನೇಕರು ದೇವರ ಬಗ್ಗೆ ಸ್ವಲ್ಪವೂ ಜ್ಞಾನವಿಲ್ಲದೆ ಬದುಕುವರು. ಇವರು ಒಂದು ಕಡೆ ಇರಲಿ ಷಡುದರ್ಶನ (ಸಾಂಖ್ಯ- ಯೋಗ, ನ್ಯಾಯ-ವೈಶೇಷಿಕ, ಪೂರ್ವಮೀಮಾಂಸ – ಉತ್ತರ ಮೀಮಾಂಸ) ಆಗಮ, ಪುರಾಣ ಎಲ್ಲ ಓದಿಯೂ ದೇವರು ಇದ್ದಾನೆಯೋ ಇಲ್ಲವೋ ಎಂಬ ಚರ್ಚೆ ಮಾಡುವ ಅಜ್ಞಾನಿಗಳಾಗಿ ಇರುವರು. ಷಡುಶೈವರು ಸಹ ಶಿವನನ್ನೇ ದೇವರೆಂದು ನಂಬಿ ಹರಿಹಂಚಾಗಿ ಹೋದರು. ಸೃಷ್ಟಿಕರ್ತ ಲಿಂಗದೇವನನ್ನು ನಂಬಿದ ನಿಜ ಲಿಂಗವಂತರಿಗೆ ಇವರಾರನ್ನೂ ಸಮ ಎನ್ನಲಾಗದು. ಅದ್ವೈತಿಗಳು "ಅಹಂ ಬ್ರಹ್ಮಾಸ್ಮಿ"- ನಾನೇ ಬ್ರಹ್ಮ, ಇನ್ನಾವ ಲಿಂಗಾರಾಧನೆಯೂ ಬೇಡ ಎಂದು ಅಹಂಕಾರದಿಂದ ಬುದ್ಧಿಗೆಟ್ಟು ಕ್ರಮತಪ್ಪಿ ಹೋದರು. ಬ್ರಹ್ಮನು ನಾನೇ ಶ್ರೇಷ್ಠ ಎಂದು ಅಹಂಕರಿಸಿ ವೀರಭದ್ರನಿಂದ ಶಿರವ ಹೋಗಾಡಿಸಿಕೊಂಡನು. ಬ್ರಹ್ಮ ಮುಂತಾದ ದೇವತೆಗಳು ದೇವರನ್ನು ಅರಿಯದೆ ಹೋದರು. ಲಿಂಗದೇವನ ಶರಣರು ಹಮ್ಮನ್ನು ತೊರೆದು ದೇವರಿಗೆ ಶರಣಾದ್ದರಿಂದ ಜಗದ್ವಂದ್ಯರಾದರು.

1398. ದೃಷ್ಟಿಯೋಗದ ಮಹತ್ವ

ಗುರುಕಾರುಣ್ಯವಿಡಿದು ಬಂದ ತನ್ನ ಕರಸ್ಥಲದ ಇಷ್ಟಲಿಂಗದಲ್ಲಿ ದೃಷ್ಟಿನಟ್ಟು
ಭಾವಸಂಪನ್ನನಾಗಿ ನಿಂದು, ನಿಜವನ್ನೈದಲರಿಯದೆ
ಪವನಮುಖದಿಂದ ಲಿಂಗವನರಿದೆನೆಂಬುದೆ ದ್ರೋಹ
ಇಡಾ ಪಿಂಗಳ ಸುಷುಮ್ನಾನಾಳವ ಬಲಿದು
ಲಿಂಗವ ಕಂಡೆಹೆನೆಂಬ ಕ್ರೂರಕರ್ಮಿಗಳನು ಲಿಂಗದೇವ
ಕೆಡಹಿ ಮೂಗ ಕೊಯ್ವ ಕಾಣಿರೊ.

ಗುರುವಿನ ಮೂಲಕ ಇಷ್ಟಲಿಂಗವು ಪ್ರಾಪ್ತಿಯಾಗುತ್ತದೆ. ಅದು ಗುರುವಿನ ಅನುಗ್ರಹವನ್ನು ಹೊಂದಿರುತ್ತದೆ. ಅದರಲ್ಲಿ ದೃಷ್ಟಿನೆಟ್ಟು ತ್ರಾಟಕಯೋಗ ಮಾಡಬೇಕು, ಭಕ್ತಿ ಭಾವ ಸಂಪನ್ನತೆಯಿಂದ ಅರ್ಚಿಸಬೇಕು. ಹೀಗೆ ಮಾಡಲರಿಯದೆ ಪ್ರಾಣಾಯಾಮದ ಮೂಲಕ ದೇವರನ್ನು ಅರಿಯುತ್ತೇನೆ ಎಂಬುದು ದ್ರೋಹವಾಗುತ್ತದೆ. ಇಡಾ ಪಿಂಗಳ ಸುಷುಮ್ನಾನಾಡಿಯನ್ನು ಬಲಿದು ಲಿಂಗವ ಕಂಡೆನೆಂಬುದು ಸರಿಯಲ್ಲ. ಈ ಸಾಧನೆ ಕ್ರೂರ ಕರ್ಮ, ಪರಿಶ್ರಮದ್ದು. ಕೆಲವೊಮ್ಮೆ ಅಡ್ಡ ಮತ್ತು ವಿಕೃತ ಪರಿಣಾಮ ದೇಹದ ಮೇಲೆ ಆಗುವುದು ಉಂಟು. ಭಕ್ತಿಯೋಗದ ಒಂದಂಗವಾದ ತ್ರಾಟಕ (ದೃಷ್ಟಿ)ಯೋಗ ಸುಲಭ ಸಾಧನ.

1399. ಶರಣ ಸೇವಕನಾರು?

ಗುರಿಯನೆಚ್ಚವನೇ ಬಿಲ್ಲಾಳು
ಇರಿದು ರಣದಲ್ಲಿ ತಿರುಗದವನೇ ಮಾಸಾಳು
ದಾರಿದ್ರ್ಯವನೆ ಪರಿದವನೇ ದಯಾಳು
ಗುರುಪಾದಭಕ್ತಿಯುಳ್ಳಾದವನದೇ ಬಾಳು
ಲಿಂಗದೇವನ ಶರಣರಾಳು.

ಸರಿಯಾಗಿ ಗುರಿಗೆ ಬಾಣವನ್ನು ಬಿಡುವವನೇ ಬಿಲ್ಲಾಳು. ಯುದ್ಧ ಭೂಮಿಯಲ್ಲಿ ಬೆನ್ನತೋರಿಸಿ ಹೇಡಿಯಂತೆ ಓಡದವನೇ ಮಾಸಾಳು. ಇನ್ನೊಬ್ಬರ ಕಷ್ಟಕ್ಕೆ ಮರುಗಿ ಅವರ ದಾರಿದ್ರ್ಯವನ್ನು ಹರಿದವನೇ ದಯಾಳು. ಗುರುಪಾದ ಭಕ್ತಿಯುಳ್ಳವನದೇ ನಿಜವಾದ ಬಾಳು.

ಅವನೇ ಲಿಂಗದೇವನ ಶರಣರ ನಿಜ ಆಳು- ಸೇವಕ.

1400. ಪಂಚ ಸೂತಕಗಳು ಭಕ್ತಂಗೆ ಇಲ್ಲ

ಜನನ ಸೂತಕ, ಕುಲಸೂತಕ, ರಜಸೂತಕ, ಎಂಜಲುಸೂತಕ, ಪ್ರೇತಸೂತಕ
ಎಂಬಿವಾದಿಯಾದ ಸರ್ವಸೂತಕಂಗಳು
ಅಂಗಲಿಂಗ ಸಂಬಂಧಿಗಳಾದ ಲಿಂಗಭಕ್ತರಿಗಿಲ್ಲ ನೋಡಾ
ಪೂರ್ವಾಚಾರವನಳಿದು ಪುನರ್ಜಾತನಾಗಿ,
ಅಂಗದ ಮೇಲೆ ಲಿಂಗಸಾಹಿತ್ಯವಾದ ಭಕ್ತಂಗೆ
ಜನನಸೂತಕವೆಂಬುದು ಪಾತಕ ನೋಡಾ
ಶಿವಭಕ್ತರಾದ ಬಳಿಕ ಭವಿನೇಮಸ್ತರ ಕಳೆದು
ಶಿವಕುಲವೆ ಕುಲವಾದ ಭಕ್ತರಿಗೆ ಕುಲಸೂತಕವೆಂಬುದೆ ಪಾತಕ ನೋಡಾ,
ಗುರುತೀರ್ಥ, ಲಿಂಗಪಾದತೀರ್ಥ, ಜಂಗಮಪಾದತೀರ್ಥ ಆದಿಯಾದ
ಲಿಂಗೋದಕ, ಪಾದೋದಕ, ಪ್ರಸಾದೋದಕ ಎಂಬ ತ್ರಿವಿಧೋದಕದಲ್ಲಿ
ಸರ್ವಪ್ರಯತ್ನ, ನಾನಾ ಕ್ರಿಯಾವಿಧಾನ, ಸ್ನಾನಪಾನಂಗಳಿಂದ
ಬಾಹ್ಯಾಭ್ಯಂತರ ಶುಚಿಯಾದ, ಶುದ್ಧನಿರ್ಮಲದೇಹಿಯಾದ ಭಕ್ತಂಗೆ
ಎಂಜಲಸೂತಕವೆಂಬುದೆ ಪಾತಕ ನೋಡಾ
ಗುರುವಿನಿಂದ ಜನನ, ಚರಲಿಂಗದಿಂ ಸ್ಥಿತಿ,
ಪರಮಪಾವನ ಘನಮಹಾಲಿಂಗದೊಳೈಕ್ಯ.
ನಿಜಲಿಂಗೈಕ್ಯವಾದ ಸದ್ಭಕ್ತಂಗೆ
ಪ್ರೇತಸೂತಕವೆಂಬುದೇ ಪಾತಕ ನೋಡಾ,
ಇಂತೀ ಪಂಚಸೂತಕವನುಳ್ಳ ಪಾತಕಂಗಳ
ಪಂಚಾಚಾರಯುಕ್ತನಾದ ಸದ್ಭಕ್ತಂಗೆ ಕಲ್ಪಿಸುವ
ಪಂಚಮಹಾಪಾತಕರ ಅಘೋರ ನರಕದಲ್ಲಿಕ್ಕುವ ಲಿಂಗದೇವಾ.

ಮಗು ಹುಟ್ಟಿದಾಗ ಹೆರಿಗೆಯಾದ ಮನೆಯಲ್ಲಿ ಸೂತಕ ಅಂದರೆ ಮೈಲಿಗೆ, ಕುಲಸೂತಕ ಅಂದರೆ ಬೇರೆ ಜಾತಿ(ಕುಲ)ಯವರನ್ನು ಮುಟ್ಟಿಸಿಕೊಂಡಾಗ ಮೈಲಿಗೆ, ರಜಸೂತಕ ಅಂದರೆ ಸ್ತ್ರೀಯರು ಮುಟ್ಟಾದಾಗ ಅವರು ಮೈಲಿಗೆಯಾಗುವರು. ಎಂಜಲ ಸೂತಕ ಬೇರೆಯವರು (ಭವಿಗಳು) ಮುಟ್ಟಿದ ನೀರು, ಹೂವು ಸೂತಕ, ಪ್ರೇತ ಸೂತಕ ಅಂದರೆ ಸತ್ತಾಗ ಅವರ ಮನೆಯಲ್ಲಿ ಮೈಲಿಗೆ ಎಂಬವು ಈ ಐದು ಸೂತಕಗಳು.

ಇವು ದೇಹದ ಮೇಲೆ ಇಷ್ಟಲಿಂಗವನ್ನು ಧರಿಸಿಕೊಂಡು ಲಿಂಗಾಯತರಿಗೆ ಇಲ್ಲ. ದೀಕ್ಷಾ ನಂತರ ಪೂರ್ವದ ಆಚರಣೆಗಳನ್ನು ಕಳೆದುಕೊಂಡ ಪುನರ್ಜಾತನಾಗಿ ದೇಹದ ಮೇಲೆ ಇಷ್ಟಲಿಂಗ ದೇವನನ್ನು ಧರಿಸಿಕೊಂಡ ಮೇಲೆ ಜನನ ಸೂತಕ ಬರುತ್ತದೆ ಎಂದು ಕೊಳ್ಳುವುದೇ ಪಾಪ ಕಾರ್ಯ. ತಾಯಿ ಗರ್ಭವತಿ ಇರುವಾಗಲೇ ಗರ್ಭಲಿಂಗ ಧಾರಣೆ ಮಾಡಿಸಲಾಗುತ್ತದೆ. ಹುಟ್ಟುವ ಮಗು ಭವಿಯಾಗಿ ಹುಟ್ಟದೆ ಭಕ್ತನಾಗಿಯೇ ಹುಟ್ಟುತ್ತದೆ. ಹುಟ್ಟಿದ ಮೇಲೆ ಲಿಂಗಧಾರಣೆಯಾಗುತ್ತದೆ. ಹೀಗಿರುವಾದ ಹುಟ್ಟುವಿಕೆ ಮೈಲಿಗೆ, ಆ ಮನೆಯೇ ಮೈಲಿಗೆ ಎನ್ನುವುದು ಪಾಪಕಾರ್ಯ.

ಭವಿತ್ವವನ್ನು ಕಳೆದು ಭಕ್ತರ ಮಾಡಿದ ಬಳಿಕ ಅವರಲ್ಲಿ ಪೂರ್ವದ ಜಾತಿ, ಮೇಲು ಕೀಳು ಎಂಬ ವಿಂಗಡಣೆ ಗುರುತಿಸುವುದು ತಪ್ಪು. ಕೆಲವು ಜನ ಲಿಂಗಾಯತರು ಆಚಾರ ಸಂಪನ್ನರು, ಪೂಜಾನಿಷ್ಠರೂ ಆಗಿರುವರಾದರೂ ಇಷ್ಟಲಿಂಗಪೂಜೆ ಮಾಡಿ, ಅದನ್ನು ಎತ್ತಿ ಜಗುಲಿಯ ಮೇಲಿಟ್ಟು ತಮ್ಮ ಕಾಯಕಕ್ಕೆ ಹೊರಡುವರು. ಏಕೆಂದು ಕೇಳಿದರೆ, "ವೈದ್ಯರಾಗಿ

ಅನ್ಯ ಜಾತಿಯ ರೋಗಿಗಳಿಗೆ ಮುಟ್ಟಿ ಚಿಕಿತ್ಸೆ ಮಾಡಬೇಕಾಗುತ್ತದೆ."ಎನ್ನುವರು. "ಸಿಟಿ ಬಸ್ಸಿನಲ್ಲಿ ಅನ್ಯಜಾತಿಯವರೊಡನೆ ಪಯಣಿಸಬೇಕಾಗುತ್ತದೆ. ಇದರಿಂದ ಇಷ್ಟಲಿಂಗ ಮೈಲಿಗೆ ಯಾಗುತ್ತದೆ." ಎನ್ನುವರು. ಇದು ತಪ್ಪು ತಿಳುವಳಿಕೆ. ಲಿಂಗಾಯತ ಧರ್ಮದಲ್ಲಿ ಜಾತಿ ಸೂತಕವಿಲ್ಲ.

ರಜ ಸೂತಕವಿಲ್ಲ; ಮುಟ್ಟಾದಾಗ ಮೈಲಿಗೆ ಎಂಬುದಿಲ್ಲ. ಆಗ "ಹೊರಗೆ ಕೂಡ್ರುವುದು" ಎಂಬುದಿಲ್ಲ. ಮುಟ್ಟು ಕಾಣಿಸಿಕೊಳ್ಳುತ್ತಿದ್ದಂತೆಯೇ ತಲೆಯ ಮೇಲೆ ನೀರು ಹಾಕಿಕೊಂಡು ಲಿಂಗ ತೀರ್ಥವನ್ನಾಗಲಿ, ಗುರು-ಜಂಗಮ ಪಾದೋದಕವನ್ನಾಗಲಿ ಸಿಂ ಪಡಿಸಬೇಕು. ಸ್ನಾನದ ನಂತರ ಇಷ್ಟಲಿಂಗಪೂಜೆ ಮಾಡಿ ತನ್ನ ನಿತ್ಯದ ಕ್ರಿಯೆಗಳನ್ನು ಮಾಡ ಬೇಕು. (ಮುಟ್ಟು ಕಾಣಿಸಿಕೊಳ್ಳುತ್ತಿದ್ದಂತೆಯೇ ಸ್ನಾನಕ್ಕೆ ಕಳಿಸುತ್ತಿದ್ದರು. ಬೇರೆಯವರು ನೀರು ಹಾಕುತ್ತಿದ್ದರು. ನಮ್ಮ ಕರಡಿಗೆಯನ್ನು ತೆಗೆದು ಅದರೊಳಗಿರುವ ಇಷ್ಟಲಿಂಗದ ಮೇಲೆ ನೀರು ಹಾಕಿ ಆ ತೀರ್ಥವನ್ನು ಬಲಗೈಯ ಅಂಗೈಗೆ ಸುರಿದುಕೊಂಡು ತಲೆಯ ಮೇಲೆ ಸಿಂಪಡಿಸಿಕೊಳ್ಳುತ್ತಿದ್ದೆವು. ಇದೇ ಶುದ್ಧೀಕರಣ ಕ್ರಿಯೆ)

ಎಲ್ಲವನ್ನೂ ಶುದ್ಧಿಮಾಡಲು ಲಿಂಗಾಯತ ಧರ್ಮದಲ್ಲಿ ಮೂರು ರೀತಿಯ ಉದಕಗಳಿವೆ. ಲಿಂಗೋದಕ, ಪಾದೋದಕ, ಪ್ರಸಾದೋದಕ ಎಂಬುದಾಗಿ. ಇಷ್ಟಲಿಂಗವನ್ನು ಪೂಜಿಸಿ, ಅದರ ನೆತ್ತಿಯ ಮೇಲೆ ಮೂರುಬಾರಿ ಉದಕವನ್ನು ಎರೆದು ಸಂಗ್ರಹಿಸುವುದು ಲಿಂಗೋದಕ. ಗುರು-ಜಂಗಮರ ಪಾದದ ಅಂಗುಷ್ಠದ ಮೇಲೆ ಎರೆದು ತೆಗೆದುದು ಪಾದೋದಕ.

ಹಸ್ತಕ್ಕೆ ವಿಭೂತಿ ಧರಿಸಿ 12 ಬಾರಿ ಮಂತ್ರ ಹೇಳಿ ಆ ಬೆರಳುಗಳನ್ನು ಮಂತ್ರ ಸಹಿತವಾಗಿ ನೀರಲ್ಲಿ ಅದ್ದುವುದು ಪ್ರಸಾದೋದಕ(ಹಸ್ತೋದಕ, ಕರುಣೋದಕ). ಆದ್ದರಿಂದ ಸ್ನಾನ, ಪೂಜೆ, ತೀರ್ಥ ಸ್ವೀಕಾರ ಮುಂತಾದ ಕ್ರಿಯಾವಿಧಾನಗಳು ಇದ್ದು ಇವುಗಳಿಂದ ಬಹಿರಂಗ ಶುದ್ಧಿ ಅಂತರಂಗ ಶುದ್ಧಿ ಎರಡೂ ಸಾಧ್ಯವಿರುವುದರಿಂದ ಶರಣರು ಶುದ್ಧ ನಿರ್ಮಲ ದೇಹಿಗಳು. ಆದ್ದರಿಂದ ರಜ ಸೂತಕ ಆಚರಿಸಬಾರದು.

ಉಚ್ಛಿಷ್ಠ ಸೂತಕ ಅಂದರೆ ಎಂಜಲನ್ನು ಎಲ್ಲ ರಂಗದಲ್ಲಿ ಹುಡುಕುವುದು. ಉದಾಹರಣೆಗೆ ಭವಿ ಮುಟ್ಟಿದ, ನೋಡಿದ ನೀರು ಎಂಜಲು; ದುಂಬಿ ಮುಟ್ಟಿದ ಹೂವು ಎಂಜಲು, ಕರು ಚೀಪಿದ ಹಾಲು ಎಂಜಲು- ಹೀಗೆ ಬಗೆ ಬಗೆಯ ಭ್ರಾಂತಿಯಿಂದ ಬಳಲುವರು. ಗುರುವಿನ ಹಸ್ತದಿಂದ ಬಂದುದು ಶುದ್ಧಪ್ರಸಾದ, ಲಿಂಗಮುಖೇನವಾಗಿ ಬಂದುದು ಸಿದ್ಧಪ್ರಸಾದ, ಜಂಗಮನ ಮುಖಾಂತರ ಬಂದುದು ಪ್ರಸಿದ್ಧ ಪ್ರಸಾದ. ಹೀಗೆ ನಾವು ಎಲ್ಲವನ್ನೂ ನಿವೇದಿಸಿ, ಪ್ರಸಾದವಾಗಿ ಸ್ವೀಕಾರ ಮಾಡುವ ಕಾರಣ ನಮಗೆ ಎಂಜಲೆಂಬುದಿಲ್ಲ. ಅದೇ ರೀತಿ ಪ್ರೇತ ಸೂತಕ, ಮರಣ ಸೂತಕ ಎಂಬುದು ಲಿಂಗಾಯತರಿಗೆ ಇಲ್ಲ. ಯಾರಾದರೂ ಸತ್ತರೆ ಸೂತಕ ಬಡಿಯಿತು ಎಂಬುದು, ಸತ್ತ ಗಳಿಗೆ ಎಂಥದ್ದು ಎಂದು ಜ್ಯೋತಿಷಿಗಳನ್ನು ಕೇಳುವುದು ಇವೆಲ್ಲ ನಿಷಿದ್ಧ. ಏಕೆಂದರೆ ಗುರುವಿನ ಹಸ್ತದಲ್ಲಿ ಹುಟ್ಟುವನು, ಜಂಗಮನಿಂದ ಆಗಾಗ ಅನುಗ್ರಹ ಪಡೆಯುವನು, ಅಂತಿಮವಾಗಿ ಮಹಾಘನಲಿಂಗದಲ್ಲಿ ಐಕ್ಯನಾಗುವನು. ಸತ್ತರು, ದೆವ್ವ (ಪ್ರೇತ)ವಾಗುವರು ಎಂಬ ಕುಭಾಷೆಯೇ ಸಲ್ಲ. ಪಂಚಾಚಾರ ಉಳ್ಳ ಸದ್ಭಕ್ತರಿಗೆ ಪಂಚ ಸೂತಕಗಳನ್ನು ಕಲ್ಪಿಸುವವರಿಗೆ ಲಿಂಗದೇವ ನರಕದಲ್ಲಿ ಇಕ್ಕುವ.

1401. ಸರ್ವಾಂಗಲಿಂಗ

ಜಿಹ್ವೆ ಗುರು, ಕಂಗಳು ಲಿಂಗ, ನಾಸಿಕವಾಚಾರ
ಹಸ್ತ ಜಂಗಮ, ಶ್ರೋತ್ರ ಪ್ರಸಾದ
ಈ ಪಂಚಾಚಾರ ಸಂಜ್ಞೆಯನು,
ಶುದ್ಧ, ಸಿದ್ಧ, ಪ್ರಸಿದ್ಧ ಪ್ರಸಾದಯೋಗಸಂಜ್ಞೆಯನೆನಗೆ
ನೀ ಕರುಣಿಸಲಾಯಿತ್ತು, ಲಿಂಗದೇವಾ.

ಲಿಂಗಾಯತ ಧರ್ಮದ ಯೋಗವಾದ ಲಿಂಗಾಂಗಯೋಗದ ಪ್ರಕಾರ ಸರ್ವಾಂಗವೂ ಲಿಂಗಮಯವಾಗಬೇಕು. ಪಂಚೇಂದ್ರಿಯಗಳಲ್ಲಿ ಒಂದಾಗಿ ಜಿಹ್ವೆ (ನಾಲಿಗೆ) ಗುರು ಲಿಂಗ, ಕಣ್ಣು-ಶಿವಲಿಂಗ, ಮೂಗು ಆಚಾರಲಿಂಗ, ಹಸ್ತ ಜಂಗಮಲಿಂಗ, ಶ್ರೋತ್ರ ಪ್ರಸಾದ ಲಿಂಗ- ಹೀಗೆ ದೈವೀಕರಣಗೊಳ್ಳಬೇಕು. ಇದೂ ಸಹ ಪಂಚಾಚಾರ ಗುರುವಿನಿಂದ ಬಂದ ಶುದ್ಧ ಪ್ರಸಾದ, ಲಿಂಗದ ಮೂಲಕ ಬಂದ ಸಿದ್ಧಪ್ರಸಾದ ಜಂಗಮದ ಮೂಲಕ ಬಂದ ಪ್ರಸಿದ್ಧ ಪ್ರಸಾದ ಇವುಗಳಿಂದ ಸರ್ವಾಂಗವೂ ದೈವೀಕರಣಗೊಳ್ಳುವುದು. ಈ ಜ್ಞಾನವನ್ನು ಲಿಂಗದೇವ ನೀವು ಕರುಣಿಸಲು ನನಗೆ ಇದು ಪ್ರಾಪ್ತವಾಯಿತು.

1402. ಲಿಂಗದೇವನಿಗೆ ಶರಣಾದೆ

ತನು ಮುಟ್ಟಿದ ಭಕ್ತಿಗೆ ತನುವೆ ಅರ್ಪಿತ,
ಮನಮುಟ್ಟಿದ ಭಕ್ತಿಗೆ ಮನವೆ ಅರ್ಪಿತವಯ್ಯಾ
ಎನ್ನ ತನುಮನವೆರಡು ನಿಮ್ಮ ಚರಣಕ್ಕೆ ವೇದ್ಯ ನೋಡಯ್ಯಾ
ತ್ರಾಹಿ ತ್ರಾಹಿ ಶರಣಾರ್ಥಿ ಶರಣಾರ್ಥಿ
ನೀವೇ ಬಲ್ಲಿರಿ, ಲಿಂಗದೇವಾ.

ಭಕ್ತಿ ತನುವಿನಿಂದಲೂ ಆಗಬೇಕು, ಮನದಿಂದಲೂ ಆಗಬೇಕು. ತನುವಿನ ಭಕ್ತಿ ಗಾಢವಾಗಿ ಮನದಲ್ಲಿ ಇಲ್ಲದಿದ್ದರೆ ಕಾಳು ಇಲ್ಲದಿರುವ ಸಿಪ್ಪೆ; ಮನದಲ್ಲಿ ಭಕ್ತಿ ಇದ್ದು ಅದು ಆಚಾರದಲ್ಲಿ ತನುವಿನ ಮೂಲಕ ವ್ಯಕ್ತವಾಗದಿದ್ದರೆ ಸಿಪ್ಪೆ ಇಲ್ಲದ ಅಕ್ಕಿಕಾಳು; ಬಿತ್ತಿದರೆ ಬೆಳೆಯದು. ತನ್ನ ತನುವನ್ನು ದೇವನಿಗೆ ಅರ್ಪಿಸಿದರೆ ಪ್ರಾಣ ಹೋದರೂ ಲೆಕ್ಕಿಸಬಾರದು. ಮನವನ್ನು ದೇವನಿಗೆ ಅರ್ಪಿಸಿದರೆ ಆಗ ನಿಂದ್ಯನಾದರೂ ಲೆಕ್ಕಿಸಬಾರದು. ಏಕೆಂದರೆ ಜಗತ್ತಿನ ಜನರು ಬಹಳ ವಿಚಿತ್ರವಾಗಿರುವರು. ಉಳಿದ ಲೌಕಿಕರನ್ನು ಯಾರೂ ನಿಂದಿಸರು ದೇವರಿಗಾಗಿ ಹಂಬಲಿಸುವವರನ್ನು, ಬಗೆಬಗೆಯಾಗಿ ನಿಂದಿಸುವರು, ಹುಚ್ಚರೆಂದು ವ್ಯಂಗ್ಯ ವಾಡುವರು. ಭಕ್ತನು ಇದಕ್ಕೆ ಹೆದರಬೇಕಿಲ್ಲ, ಮುಜುಗರ ಪಡಬೇಕಿಲ್ಲ. "ಲಿಂಗದೇವಾ, ನನ್ನ ತನು ಮನ ಎರಡನ್ನೂ ನಿನ್ನ ಚರಣಕ್ಕೆ ಸಲ್ಲಿಸಿ ನಾನು ಶರಣಾರ್ಥಿಯಾಗಿ ಬಂದಿದ್ದೇನೆ.." ಎನ್ನುವರು ಗುರು ಬಸವಣ್ಣನವರು.

1403. ತ್ರಿವಿಧೋದಕ

ತ್ರಿವಿಧೋದಕದ ವಿವರವೆಂತೆಂದಡೆ
ಲಿಂಗೋದಕ, ಪಾದೋದಕ, ಪ್ರಸಾದೋದಕ
ಲಿಂಗದೋದಕವೆಂದು ಶಿವಮಂತ್ರ ಸಂಸ್ಕಾರದಿಂದಾದುದು
ಪಾದೋದಕವೆಂದು ಲಿಂಗಕ್ಕೆ ಮಜ್ಜನಕ್ಕೆರೆದುದು
ಪ್ರಸಾದೋದಕವೆಂದು ಲಿಂಗಕ್ಕೆ ಆರೋಗಣೆಯಂ ಮಾಡಿಸಿದುದು
ಇಂತೀ ತ್ರಿವಿಧೋದಕವ ಧರಿಸುವ ಕ್ರಮವೆಂತೆಂದಡೆ
ಲಿಂಗೋದಕದಲ್ಲಿ ಪಾಕಪ್ರಯತ್ನ ಮಜ್ಜನಾದಿಗಳಂ ಮಾಡುವುದು
ಪಾದೋದಕಮಂ ಶಿರಸ್ಸಿನ ಮೇಲೆ ತಳಿದು
ಮುಖಂ ಪ್ರಕ್ಷಾಲನಮಂ ಮಾಡುವುದು
ಪ್ರಸಾದೋದಕಮಂ ಆರೋಗಣೆಯ ಮಾಡುವುದು
ಲಿಂಗದೇವನಲ್ಲಿ ಸದ್ಭಕ್ತನಾದಡೆ.

ಲಿಂಗೋದಕ, ಪಾದೋದಕ ಮತ್ತು ಪ್ರಸಾದೋದಕ ಎಂದು ಮೂರು ಬಗೆ. ಲಿಂಗೋದಕ ಎಂದರೆ ಮಂತ್ರವನ್ನು ಹೇಳಿ ಆ ಬೆರಳುಗಳನ್ನು ನೀರಿನಲ್ಲಿ ಎದ್ದಿ ಮಾಡಿದ ಮಂತ್ರೋದಕ. ಪಾದೋದಕ ಎಂದರೆ ಇಷ್ಟಲಿಂಗದ ಮಜ್ಜನಕ್ಕೆ ಎರೆದುದು (ಗುರು

ಪಾದೋದಕ ಎಂದರೆ ಗುರುವು ಇಷ್ಟಲಿಂಗ ಪೂಜೆಗೆ ಕುಳಿತು ಇಷ್ಟಲಿಂಗಕ್ಕೆ ಮಜ್ಜನಕ್ಕೆ ಎರೆವಾಗ ಬೀಳುವ ನೀರು. ಅದೇ ರೀತಿ ಜಂಗಮ ಪಾದೋದಕ ಎಂದರೆ ಜಂಗಮನು ಪೂಜೆಗೆ ಕುಳಿತು ತನ್ನ ಅಂಗೈಯಲ್ಲಿ ಲಿಂಗವನಿಟ್ಟುಕೊಂಡು ಅದಕ್ಕೆ ಮಜ್ಜನಕ್ಕೆ ಎರೆವಾಗ ಬೀಳುವ ನೀರು. ಇದನ್ನು ಭಕ್ತರು ತಮ್ಮ ಇಷ್ಟಲಿಂಗದ ಮೇಲೆ ಹಾಕಿಸಿಕೊಳ್ಳಲು ಅಡ್ಡಿಯಿಲ್ಲ.

["ಯಾರ ಪಾದದ ಉದಕವನ್ನು ಇಷ್ಟಲಿಂಗದ ಮೇಲೆ ಎರೆಯಬಾರದು." ಎಂಬ ನಿರ್ಣಯವನ್ನು ಶರಣ ಮೇಳದಲ್ಲಿ ತೆಗೆದುಕೊಳ್ಳಲಾಗಿದೆ. ಇತ್ತೀಚೆಗೆ ನಮ್ಮ ಭಕ್ತರೊಬ್ಬರು ಒಬ್ಬ ಸ್ವಾಮಿಗಳ ಪಾದೋದಕವನ್ನು ಇಷ್ಟಲಿಂಗದ ಮೇಲೆ ಎರೆಸಿಕೊಳ್ಳಲು ನಿರಾಕರಿಸಿದಾಗ ಆ ಸ್ವಾಮಿಗಳು ಸ್ವತಃ ಗುರು ಬಸವಣ್ಣನವರೇ ಹೇಳಿದ್ದಾರೆ ಎಂದರಂತೆ. ನಾವು ಚರ್ಚಿಸಿ ಒಂದು ನಿರ್ಣಯಕ್ಕೆ ಬಂದಿದ್ದೆವು. ಆದರೀಗ "ಪಾದೋದಕ"- 1 ಇದರ ವ್ಯಾಖ್ಯೆ ವಚನದಲ್ಲಿ ಸಿಕ್ಕಿದೆ. ನಮ್ಮ ವಾದಕ್ಕೆ ಅಧಿಕೃತ ಮುದ್ರೆ ಬಿದ್ದಿದೆ.]

ಪ್ರಸಾದೋದಕ ಎಂದರೆ ಇಷ್ಟಲಿಂಗಪೂಜೆ ಮಾಡಿದ ನಂತರ 3 ಬಾರಿ ಉದಕವನ್ನು – ಗುರು ಪಾದೋದಕ (ಬಸವ ಕರುಣೋದಕ), ಲಿಂಗ ಪಾದೋದಕ (ಲಿಂಗ ಕರುಣೋದಕ) ಜಂಗಮ ಪಾದೋದಕ (ಶರಣ ಕರುಣೋದಕ) ಎಂದು ಎರೆದು ಸ್ವೀಕರಿಸುವುದು. ಈ ತ್ರಿವಿಧೋದಕವನ್ನು ಬಳಸುವ ಕ್ರಮ ಹೇಗೆಂದರೆ, ಸ್ನಾನ ಮಾಡಲು, ಅಡಿಗೆ ಮಾಡಲು ಮಂತ್ರೋದಕ (ಲಿಂಗೋದಕ)ವನ್ನು ಬಳಸುವುದು. ವಿಭೂತಿಯನ್ನು ಬಲಗೈಗೆ ಸವರಿಕೊಂಡು ಓಂ ಶ್ರೀ ಗುರು ಬಸವಲಿಂಗಾಯ ನಮಃ ಮಂತ್ರವನ್ನು ಹೇಳುತ್ತ ಸ್ನಾನಕ್ಕೆ ಇಟ್ಟುಕೊಂಡ ನೀರಿನಲ್ಲಿ ಅದ್ದಿ ಅದೇ ನೀರನ್ನು ಸ್ನಾನಕ್ಕೆ ಬಳಸುವುದು. ಇಷ್ಟಲಿಂಗಕ್ಕೆ ಮಜ್ಜನಕ್ಕೆ ಎರೆದ ನೀರನ್ನು ಬಲಗೈಯಲ್ಲಿ ಹಾಕಿಕೊಂಡು ತಲೆಯ ಮೇಲೆ ಸಿಂಪಡಿಸಿ ಕೊಳ್ಳುವುದು, ಹಾಗೆಯೇ ಮುಖವನ್ನು ಸವರಿಕೊಳ್ಳುವುದು. ಇಷ್ಟಲಿಂಗದ ಮೇಲೆ ತೀರ್ಥ ವಾಗಿ ಎರೆದ ನೀರು-ಪ್ರಸಾದೋದಕವನ್ನು ಕಲ್ಲುಸಕ್ಕರೆ, ದ್ರಾಕ್ಷಿ, ಉತ್ತುತ್ತಿ ಮುಂತಾದ ಯಾವುದಾದರೊಂದು ಪ್ರಸಾದದೊಡನೆ ಆರೋಗಣೆ ಮಾಡಬೇಕು.

1404. ಶ್ರಾದ್ಧ ಮಾಡಬಾರದು

ದೇವರ ಪಾದಕ್ಕೆ ಸಂದಲ್ಲಿ
ಆತನ ಶರೀರವ ಸಮಾಧಿಯಲ್ಲಿ ನಿಕ್ಷೇಪವಂ ಮಾಡಿ
ಶ್ರಾದ್ಧ ಕೂಳ ಮಾಡುವವರು ಸದಾಚಾರಕ್ಕೆ ದೂರವಯ್ಯಾ
ಲಿಂಗದೇವಾ.

ಲಿಂಗಾಯತರು ದೇವರ ಪಾದಕ್ಕೆ ಸಂದರೆ ಅವರ ಶರೀರವನ್ನು ಭೂಮಿಯಲ್ಲಿ ಸಮಾಧಿ ಮಾಡಬೇಕು. ನಂತರ ಶ್ರಾದ್ಧ ಮಾಡಿ ಕಾಗೆ ತಿನ್ನಬೇಕು ಎಂಬ ಆಚರಣೆ, ಸತ್ತವರಿಗೆ ಪಿಂಡದಾನ ಮುಂತಾದುವನ್ನು ಮಾಡಿದರೆ ಇವರು ಸದಾಚಾರಕ್ಕೆ ದೂರವಾಗುವರು.

1405. ಕೃಪೆಗಾಗಿ ಬೇಡಿಕೆ

ನಾನರಿದೆಲ್ಲಿಯ ಪಾಶವಿದೆತ್ತಣ ಮರವೆ?
ಅಕಟಕಟಾ ತಾಮಸಕ್ಕೆ ಗುರಿ ಮಾಡಿದೆಯಲ್ಲಾ
ಎಲೆ ಕರುಣಾಂಬುನಿಧಿಯೆ, ದಯಾಪಾರಿಯೆ
ನೀನು ವಿಚಾರಿಸದಿರ್ದಡಾನೆಂತುಳಿವೆನಯ್ಯಾ?
ನಿಮ್ಮ ಕೃಪಾದೃಷ್ಟಿಯಿಂ ನಿರೀಕ್ಷಿಸಿ ನಿಮ್ಮತ್ತ ಸಾರುವಂತೆ ಮಾಡಾ
ಲಿಂಗದೇವಾ.

ಸಾಧಕ ಜೀವನದ ಹಂತದಲ್ಲಿ ಪರಿತಪಿಸುವ ಗುರು ಬಸವಣ್ಣನವರು ಏಕೆ ಮರವೆಯ ಪಾಶ ಕಾಡುತ್ತಿದೆ ಎಂದು ಚಿಂತಿತರಾಗಿದ್ದಾರೆ. "ದೇವಾ, ತಾಮಸಕ್ಕೆ ಗುರಿ

ಮಾಡಿದೆ. ನೀನು ಕರುಣೆಯ ನಿಧಿ, ದಯಾಳು. ನೀನು ನನ್ನ ಯೋಗಕ್ಷೇಮ ವಿಚಾರಿಸ ದಿರ್ದಡೆ ನಾನು ಹೇಗೆ ಉಳಿಯಲು ಸಾಧ್ಯ? ನನ್ನ ದೋಷ ದುರ್ಗುಣ ಏನನ್ನೂ ಗಮನಿಸದೆ ನಿನ್ನ ಕೃಪಾದೃಷ್ಟಿಯನ್ನು ಬೀರಿ ನಿಮ್ಮತ್ತ ಸಾರುವಂತೆ ಮಾಡು" ಎಂದು ಲಿಂಗದೇವನಲ್ಲಿ ಬೇಡಿಕೊಳ್ಳುತ್ತಿದ್ದಾರೆ.

1406. ತ್ರಿತತ್ವ

ನಿತ್ಯ ನಿರಂಜನ ಪರಂಜ್ಯೋತಿ ವಸ್ತು
ಉಪದೇಶವ ಕೊಟ್ಟು ಗುರುವಾದ
ಕರಸ್ಥಲಕ್ಕೆ ಬಂದು ಲಿಂಗವಾದ
ಹಸುರವಾದ ಪ್ರಪಂಚವನಳಿದು ದಾಸೋಹವ ಮಾಡಿಸಿಕೊಂಡು
ಜಂಗಮವಾದ
ಇಂತೀ ಗುರುಲಿಂಗ ಜಂಗಮ ಒಂದೆಯಲ್ಲದೆ ಭಿನ್ನವಿಲ್ಲ
ಈ ಮೂರಕ್ಕೆ ಮೂರನಿತ್ತು ಮೂರನೊಂದ ಮಾಡಬಲ್ಲಡೆ
ಆತ ಪ್ರಸಾದಕಾಯನಯ್ಯಾ, ಲಿಂಗದೇವಾ.

ನಿತ್ಯವೂ ನಿಷ್ಕಲಂಕವೂ, ಪರಂಜ್ಯೋತಿ ಸ್ವರೂಪನೂ ಆದ ಪರಮಾತ್ಮ ಲಿಂಗದೇವನು ಗುರು-ಲಿಂಗ-ಜಂಗಮ ಸ್ವರೂಪನಾಗುವನು. ಲೋಕದಲ್ಲಿರುವ ಅಜ್ಞಾನಿ ಮಾನವರ ಉದ್ಧಾರಕ್ಕಾಗಿ ಗುರುವಾಗಿ ಉಪದೇಶ ನೀಡುವನು. ಇಷ್ಟಲಿಂಗವಾಗಿ ಸಾಕಾರ ಗೊಂಡು ಪೂಜೆಗೊಳ್ಳುತ್ತಿರುವನು, ವರ್ಣಮಯವಾದ ಜಗತ್ತಿನ ಮೋಹವನ್ನಳಿದು ಜಂಗಮವಾಗಿ ದಾಸೋಹವನ್ನು ಭಕ್ತನು ಮಾಡಲು ಅನುಕೂಲ ಮಾಡಿಕೊಡುವನು. ಹೀಗೆ ಗುರು-ಲಿಂಗ-ಜಂಗಮ ಎಂಬುವು ಲಿಂಗದೇವರ ಮೂರು ಮುಖಗಳು. ಗುರುವಿಗೆ ತನುವನ್ನು, ಲಿಂಗಕ್ಕೆ ಮನವನ್ನು, ಜಂಗಮಕ್ಕೆ ಧನವನ್ನು ನೀಡಿ ಮುಕ್ತಿ ಎಂಬ ಫಲವನ್ನು ಪಡೆಯಬಲ್ಲಡೆ ಅಂಥ ಭಕ್ತನು ಪ್ರಸಾದ ಕಾಯನು.

1407. ಭಕ್ತನಾಗಿ ಅನಂತ ಜನ್ಮ ಬರಲಿ

ಭವಭವದಲ್ಲಿ ಭಕ್ತನಾದಡೆ ಆ ಭವವೆ ಲೇಸು ಕಂಡಯ್ಯಾ
ಲಿಂಗಾರಾಧನೆ, ಜಂಗಮಾನುಭವ ಅಂದಂದಿಗೆ ಪರಮಸುಖವಯ್ಯಾ
ಎಂದೆಂದೂ ನಾನಿದನೆ ಬಯಸುವೆ ತಂದೆ, ಕರುಣಿಸಯ್ಯಾ
ಲಿಂಗದೇವಾ.

ಅನಂತ ಜನ್ಮಗಳಲ್ಲಿ ಭಕ್ತನಾಗಿಯೇ ಹುಟ್ಟುವುದಾದರೆ ಅಂಥ ಹುಟ್ಟುವಿಕೆಯೇ (ಭವ) ಲೇಸು. ಏಕೆಂದರೆ ಮಾನವ ಜನ್ಮದಲ್ಲಿ ಇಷ್ಟಲಿಂಗಪೂಜೆಗೆ ಅವಕಾಶವಿರುತ್ತದೆ; ಜಂಗಮ ದೊಡನೆ ಅನುಭಾವ, ಸಮಾಜ ಸೇವೆ ಸಾಧ್ಯವಿರುತ್ತದೆ (ಮುಕ್ತಿಯಲ್ಲಿ ಏನಿದೆ? ಉರಿಯುಂಡ ಕರ್ಪುರದಂತೆ ಲಿಂಗದೇವನಲ್ಲಿ ಬೆರೆಯುವುದು ಮಾತ್ರವಿದೆ) ಆದ್ದರಿಂದ "ಲಿಂಗದೇವಾ ಎಂದೆಂದೂ ನಾನು ಭಕ್ತಿ ಸಹಿತವಾದ ಅನಂತ ಜನ್ಮವನ್ನೇ ನಾನು ಬಯಸುತ್ತೇನೆ. ತಂದೆ ಇದನ್ನೇ ಕರುಣಿಸು." ಎನ್ನುತ್ತಾರೆ ಗುರು ಬಸವಣ್ಣನವರು.

1408. ನಿರ್ಗುಣ ತತ್ವ

ಲಿಂಗ ಜಂಗಮ ಪ್ರಸಾದ ಎಂಬರು
ಲಿಂಗವೆಂಬೆನೆ ಅಂಗದೊಳಗಾಯಿತ್ತು.
ಜಂಗಮವೆಂಬೆನೆ? ವಾಸನೆಗೊಳಗಾಯಿತ್ತು
ಪ್ರಸಾದವೆಂಬೆನೆ? ವಿಷದೊಳಗಾಯಿತ್ತು.
ಇಂತೀ ತ್ರಿವಿಧವು ನಷ್ಟ.

ಇವರ ಮೇಲಣ ಅಂಕುರಿತ ಬಲ್ಲ
ಜಂಗಮವ ತೋರಾ ಲಿಂಗದೇವಾ.

ನಿಜವಾದ ತತ್ವವನ್ನು ಅರಿಯುವವರ ಸಂಖ್ಯೆ ಕಡಿಮೆ. ಕೆಲವು ಸನ್ಯಾಸಿಗಳು (ಜಂಗಮರು) ಬಸವ ಧರ್ಮದ ಉತ್ಕರ್ಷದ ಸಮಯದಲ್ಲಿ ಲಾಂಛನಧಾರಿಗಳಾಗಿ ಬಂದು ಬಿಟ್ಟರು. ಲಿಂಗಧಾರಣೆ ಮಾಡಿಕೊಂಡು ಕಾಷಾಯ ವಸ್ತ್ರಧರಿಸಿ ನವಲಿಂಗಾಯತರ ಬಳಿ ಪುಷ್ಕಳ ಭೋಜನ ಗಿಟ್ಟಿಸತೊಡಗಿದರು. ಲಿಂಗ ತತ್ವವನ್ನು ತಿಳಿಯುವುದಕ್ಕಿಂತ ಹೆಚ್ಚಾಗಿ ಕೇವಲ ಲಾಂಛನಧಾರಣೆಗೆ ಸೀಮಿತರಾದರು. ಜಂಗಮವಾಗಿ ನಿರ್ವಿಕಾರತ್ವ ಸಾಧಿಸುವು ದಕ್ಕಿಂತಲೂ ಶರೀರದ ಸೆಳೆತಕ್ಕೆ (ವಾಸನೆಗೆ) ಒಳಗಾದರು. ಹೊಟ್ಟೆ ಬಾಕರಾಗಿ ಉಂಡುದ ರಿಂದ ಪ್ರಸಾದವು ವಿಷವಾಯಿತು. ಹೀಗಾಗಿ ತ್ರಿವಿಧವು ನಷ್ಟವಾಯಿತು. "ಲಿಂಗ ತತ್ವವನ್ನರಿತ ವರೇ ನಿಜ ಜಂಗಮರು. ಅಂಥ ಜಂಗಮರನ್ನು ನನಗೆ ತೋರಾ ಲಿಂಗದೇವ" ಎಂದು ಗುರು ಬಸವಣ್ಣನವರು ದೇವರಲ್ಲಿ ಬೇಡುತ್ತಾರೆ.

1409. ಹುಸಿಬೇಡ

ಸಬಳದ ತುದಿಯಲ್ಲಿ ಕಟ್ಟಿದ ಗಂಟೆಯಂತೆ,
ಮಾತು ಲಿಂಗಾ ಲಿಂಗಾ ಎನ್ನುತ್ತ
ಮೊನೆ ಇರಿವಂತೆ ಬೇಡವಯ್ಯಾ, ಹುಸಿ
ಮಾತಿನಲ್ಲಿ ದಿಟ, ಮನದಲ್ಲಿ ಸಟೆ ಬೇಡವಯ್ಯಾ
ಮನ ವಚನ ಕಾಯ ಒಂದಾಗದಿದ್ದರೆ
ಲಿಂಗದೇವನೆಂತೊಲಿವನಯ್ಯಾ?

(ಸಬಳ ಎಂದರೇನು ಎಂಬುದು ತಿಳಿಯುತ್ತಲಿಲ್ಲ) ಗಾಣದ ಎತ್ತಿನ ಕೊರಳಿನಲ್ಲಿ ಒಂದು ಗಂಟೆ ಕಟ್ಟಿರುತ್ತಾರೆ. ಅದು ಎತ್ತು ತಿರುಗುವಾಗಲೆಲ್ಲ ಢಣಢಣ ಎನ್ನುತ್ತದೆ. ಹಾಗೆ ಕೆಲವರು ಮಾತನಾಡುವಾಗಲೆಲ್ಲ "ಶಿವ ಶಿವಾ" "ಲಿಂಗಾ ಲಿಂಗಾ" ಎನ್ನುತ್ತಾರೆ. ಆದರೆ ಚೂಪಾದ ಕತ್ತಿಯ ಮೊನೆ ಇರಿವಂತೆ ಸುಳ್ಳು ಹೇಳುತ್ತಾರೆ. ಮಾತಿನಲ್ಲಿ ಸತ್ಯವಂತರೆಂಬಂತೆ ನುಡಿಯಾಡುತ್ತಾರೆ ಮನಸ್ಸಿನಲ್ಲಿ ಸುಳ್ಳು ತುಂಬಿಕೊಂಡಿರುತ್ತಾರೆ. ಮನ ವಚನ ಕಾಯ ತ್ರಿಕರಣದಲ್ಲಿ ಒಂದೇ ಆಗಿರದಿದ್ದರೆ ಲಿಂಗದೇವನು ಒಲಿಯಲಾರನು.

1410. ಪ್ರಭುದೇವರ ನಿಲುವು

ಸಾಕಾರ ನಿರಾಕಾರದೊಳಗೆ ನಿರವಯಾಂಗನಾಗಿ ಸುಳಿದು
ಭಕ್ತರ ಭವವ ಹರಿಯಲೆಂದು ಬಂದ ಜಂಗಮದ ಪರಿಯ ನೋಡಾ
ಉಣಲುಡಲು ಬಂದವನಲ್ಲ ಪ್ರಭುದೇವರು
ತ್ರಿವಿಧದಾಸೆ ಮುನ್ನವೆಯಿಲ್ಲ, ಪ್ರಭುದೇವರಿಗೆ
ಭಕ್ತನೆಂಬ ತನ್ನಂಗವ ತನ್ನೊಳೈಕ್ಯವ ಮಾಡಿಕೊಂಡು
ನಿರವಯವಾಗಿ ಬಂದ ನಿರವಯನಯ್ಯಾ
ಲಿಂಗದೇವರಲ್ಲಿ ಪ್ರಭುದೇವರು.

ಪ್ರಭುದೇವರು ಶರೀರಧಾರಿಯಾದ್ದರಿಂದ ಸಾಕಾರ ಮೂರ್ತಿ. ಆದರೆ ಜಂಗಮ ತತ್ವವನ್ನು ಅಳವಡಿಸಿಕೊಂಡು ನಿರಾಕಾರ, ವ್ಯೋಮಕಾಯರಾಗಿ ನಿರವಯಾಂಗ. ಭಕ್ತರ ಭವವನ್ನು ಪರಿಹರಿಸಲೆಂದು ಬಂದ ನಿಜ ಜಂಗಮ. ವೇಷಧಾರಿ ಜಂಗಮರಂತೆ ಕೇವಲ ಉಣ್ಣಲು, ಉಡಲು ಬಂದವರಲ್ಲ. ಹೆಣ್ಣು-ಹೊನ್ನು-ಮಣ್ಣು ಎಂಬ ತ್ರಿವಿಧದ ಆಸೆ ಅವರಿಗೆ ಮೊದಲೇ ಇಲ್ಲ. ಭಕ್ತನ ಲಕ್ಷಣಗಳನ್ನು ಅಳವಡಿಸಿಕೊಂಡು ನಿರವಯವ ಜಂಗಮರಾಗಿ ನಿಂದವರು ಅಲ್ಲಮಪ್ರಭುದೇವರು.

1411. ತ್ರಿವಿಧ ಲಿಂಗಗಳ ಪ್ರತಿಷ್ಠಾಪನೆ

ಸ್ಥೂಲಪಂಚಮಹಾಭೂತಂಗಳಲ್ಲಿ ಇಷ್ಟಲಿಂಗ ಪ್ರತಿಷ್ಠೆ
ಸೂಕ್ಷ್ಮ ಪಂಚಮಹಾಭೂತಂಗಳಲ್ಲಿ ಪ್ರಾಣಲಿಂಗ ಪ್ರತಿಷ್ಠೆ
ಕಾರಣ ಪಂಚಮಹಾಭೂತಂಗಳಲ್ಲಿ ತೃಪ್ತಿ ಲಿಂಗಪ್ರತಿಷ್ಠೆ
ಇಂತೀ ಸ್ಥೂಲ, ಸೂಕ್ಷ್ಮ, ಕಾರಣವು
ಮಹಾಕಾರಣ ಮಹದ ಹೃದಯದಲ್ಲಿ ಕೊನೆದೋರಿದ
ಮಹಾಜ್ಯೋತಿಯ
ನಿಮ್ಮ ಶರಣರನುಭಾವದಲ್ಲಿದ್ದು ಕಾಣಬಹುದು. ಲಿಂಗದೇವಾ.

ಶರೀರವು ಪಂಚಭೂತಗಳಿಂದಾಗಿದೆ. ಸ್ಥೂಲ ಶರೀರದ ಮೇಲೆ ಇಷ್ಟಲಿಂಗವು ಪ್ರತಿಷ್ಠಾಪಿಸಲ್ಪಡಬೇಕು. ಸೂಕ್ಷ್ಮ ಶರೀರದಲ್ಲಿ ಪ್ರಾಣ(ಆತ್ಮ) ಲಿಂಗದ ಪ್ರತಿಷ್ಠಾಪನೆಯಾಗಬೇಕು. ಕಾರಣ ಶರೀರದಲ್ಲಿ ಭಾವ(ತೃಪ್ತಿ)ಲಿಂಗ ಪ್ರತಿಷ್ಠಾಪನೆಯಾಗಬೇಕು. ಮಹಾಜ್ಯೋತಿ ಪರಮಾತ್ಮನನ್ನು ಶರಣರ ಅನುಭಾವದ ನೆರವಿನಿಂದ ಕಾಣಬೇಕು.

1412. ಸಾಧಕನ ಜೀವನದ ಕಾಳರಾತ್ರೆ

ಹಗಲಾಯಿತ್ತು ಹೋಗದು, ಇರುಳಾಯಿತ್ತು ನಿದ್ರೆ ಬಾರದು,
ಉಳಿದವರ ಮಾತು ಸಾಗದು, ಉಳಿದವರ ಮಾತು ಸಾಗದು
ಲಿಂಗದೇವನಲ್ಲದೆ ಒಲ್ಲದು ಮನ.

ಸಾಧಕರು ದೇವರ ಹಂಬಲದಲ್ಲಿದ್ದಾಗ ಅವರು ಅನುಭವಿಸುವ ಯಾತನೆ ಅಪಾರ. ಹಗಲಾದಾಗ 'ಇದು ಬಹು ದೀರ್ಘ. ಯಾಕಾದರೂ ಆಯಿತೋ! ಇದು ಸವೆಯುತ್ತಲೇ ಇಲ್ಲ' ಎಂಬ ಚಟಪಟಿಕೆ. ರಾತ್ರಿಯಾದಾಗ ನಿದ್ರೆ ಬಾರದೆ ಚಟಪಟಿಕೆ. ಲೋಕದ ಜನರ ಜೊತೆ ಮಾತನಾಡಲು ಇಷ್ಟವಾಗುತ್ತಿಲ್ಲ. ಲಿಂಗದೇವನ ವಿಷಯವಲ್ಲದೆ ಬೇರೆ ಏನನ್ನೂ ಮನಸ್ಸು ಬಯಸುತ್ತಿಲ್ಲ.

1413. ದೇವರಲ್ಲಿ ಬೇಡಿಕೆ

ಹಳಿದವರ ಲೆಂಕ, ಮತ್ಸರಿಸುವವರ ಡಿಂಗರಿಗ
ಸಲೆಯಾಳಿಗೊಂಬವರ ತೊತ್ತಿನ ಮಗ
ಜರಿದು ಮತ್ಸರಿಸಿ ಹೊಯ್ದು ಬೈದು ಅದ್ದಲಿಸಿ
ಬುದ್ಧಿಯ ಹೇಳುವ ಹಿರಿಯರಾದ
ಡೋಹಾರ ಕಕ್ಕಯ್ಯಗಳ ಪಾದರಕ್ಷೆಯ ಕಿರುಕುಣಿಕೆಯಲ್ಲಿ
ಎನ್ನನ್ನಿಡು ಲಿಂಗದೇವಾ.

ನಾನು ಹಳಿಯುವವರ ಸೇವಕ, ಮತ್ಸರ ಪಡುವವರ ಆಳು, ಆಡಿಕೊಳ್ಳುವವರ ತೊತ್ತಿನ ಮಗ; ಜರಿದು, ಮತ್ಸರಪಟ್ಟು, ಹೊಡೆದು, ಬೈದು, ಗದರಿಸಿ ಬುದ್ಧಿ ಹೇಳುವ ಹಿರಿಯ ಶರಣರಾದ ಡೋಹರ ಕಕ್ಕಯ್ಯಗಳ ಪಾದರಕ್ಷೆಯ ಕಿರುಕುಣಿಕೆಯಲ್ಲಿ ನನ್ನನ್ನಿಡು ಲಿಂಗದೇವಾ ಎಂದು ದೇವನಲ್ಲಿ ಬೇಡುವರು

1414. ಏಕದೇವ ನಿಷ್ಠೆ

ಹಾದರದ ಮಿಂಡನ ಹತ್ತಿರ ಮಡಗಿಕೊಂಡು
ಮನೆಯ ಗಂಡನ ಒಲಿಯೆಂದಡೆ ಒಲಿವನೆ?
ತಾ ಶಿವಭಕ್ತನಾಗಿ ತನ್ನಂಗದ ಮೇಲೆ ಲಿಂಗವಿದ್ದು
ಮತ್ತೆ ಭಿನ್ನಶೈವಕ್ಕೆರಗುವುದೆ ಹಾದರ

ಲಿಂಗದೇವನು ಅವರ ಮೂಗ ಕೊಯ್ಯದೆ ಮಾಣ್ಬನೆ?

ಒಬ್ಬ ಸ್ತ್ರೀ ಪರಪುರುಷನ ಸಹವಾಸದಲ್ಲಿದ್ದು ಮದುವೆ ಮಾಡಿಕೊಂಡ ಗಂಡನ ಪ್ರೀತಿಯನ್ನು ಬಯಸಿದರೆ ಆಗುವುದೆ? ಹಾಗೆ ತಾನು ಇಷ್ಟಲಿಂಗವೆಂಬ ಪತಿಯೊಡನೆ ದೀಕ್ಷೆ ಎಂಬ ವಿವಾಹದ ಮಾಡಿಕೊಂಡು ಅದಕ್ಕೆ ನಿಷ್ಠನಾಗಿರದೆ ಮತ್ತೆ ಬೇರೆ ದೈವಗಳಿಗೆ ಎರಗುವುದು ಧಾರ್ಮಿಕ ವ್ಯಭಿಚಾರ. ಹಿಂದೆ ಅನೀತಿವಂತಳಾದ ಸ್ತ್ರೀಗೆ ಮೂಗನ್ನು ಕೊಯ್ವ ಶಿಕ್ಷೆ ನೀಡಲಾಗುತ್ತಿತ್ತು. ಹಾಗೆ ದೇವನೂ ಏಕಲಿಂಗನಿಷ್ಠೆಯಿಲ್ಲದ ಭಕ್ತನನ್ನು ಶಿಕ್ಷಿಸುವನು.

1415. ಶರಣರ ಸಂಭಾಷಣೆ

ಆಲಿ ನುಂಗಿದ ನೋಟದಂತೆ
ಬಯಲು ನುಂಗಿದ ಬ್ರಹ್ಮಾಂಡದಂತೆ
ಮುತ್ತು ನುಂಗಿದ ಉದಕದಂತೆ
ಪುಷ್ಪ ನುಂಗಿದ ಪರಿಮಳದಂತೆ
ಮಹಾನುಭಾವಿಗಳ ಸಂಗಕ್ಕೆನ್ನೊಡಲ ಗುರಿಮಾಡಿದೆನಾಗಿ
ಎನ್ನೊಡಲ ಪರಿಯಾಯ ಕೆಟ್ಟಿತಯ್ಯಾ
ಲಿಂಗದೇವಾ, ಪ್ರಭು ಮೊದಲಾದ ಶರಣರ ಸಂಭಾಷಣೆಯಿಂದ.

ವಿಸ್ತಾರವಾದ ಜಗತ್ತಿನ ದೃಶ್ಯವನ್ನು ಪುಟ್ಟದಾದ ಕಣ್ಣಿನ ಆಲಿ ಅಡಗಿಸಿಕೊಳ್ಳುವುದು. ವಿಸ್ತಾರವಾದ ಬಯಲು ಬೃಹತ್ತಾದ ಬ್ರಹ್ಮಾಂಡಗಳನ್ನು ಅಡಗಿಸಿಕೊಂಡಿರುವುದು. ಸ್ವಾತಿಯ ನೀರು ಕಪ್ಪೆ ಚಿಪ್ಪಿನಲ್ಲಿ ಬಿದ್ದು ನೀರುಗಟ್ಟಿಗೊಂಡು ಮುತ್ತಾಗುವುದು. ನೀರು ಮುತ್ತಿನಲ್ಲಿ ಹುದುಗಲ್ಪಡುವುದು. ಹೂವು ಪರಿಮಳವನ್ನು ಅಡಗಿಸಿಕೊಂಡಿರುವುದು. ಅದೇ ರೀತಿ ಜ್ಞಾನವು ಮಹಾನುಭಾವಿಗಳ ಸಂಗದಿಂದ ಪ್ರಾಪ್ತವಾಗುವುದು. "ಶರಣರ ಅನುಭಾವಕ್ಕೆ ನನ್ನ ಒಡಲನ್ನು ಗುರಿ ಮಾಡಿದ್ದರಿಂದ ಒಡಲ ಗುಣಗಳು ಅಳಿದು ಹೋದವು. ಪ್ರಭು ಮೊದಲಾದ ಶರಣರ ಸಂಭಾಷಣೆಯಿಂದ ನಾನು ಪರಿಪೂರ್ಣನಾದೆ." ಎನ್ನುತ್ತಾರೆ ಗುರು ಬಸವಣ್ಣನವರು.

1416. ಸುಖ–ದುಃಖ ಸಮಚಿತ್ತ

ಸುಖವಾದಡುಂಡು, ದುಃಖ ಬಂದಲ್ಲಿ ಬಳಲಿದಡಹುದೆ?
ತುಯ್ಯಲೆಂದಡುಂಡು, ಹುಯ್ಯಲೆಂದಡಹುದೆ?
ಕೇಳಯ್ಯ ಲಿಂಗದೇವಾ ನೀ ಮಾಡಿದ ಮಾಟಕ್ಕಾಡಿದಡಹುದೆ?

ಸುಖವು ಬಂದಾಗ ಸಂತೋಷದಿಂದ ಉಂಡು, ದುಃಖ ಬಂದಾಗ ಇದು ಬೇಡ ಎಂದು ಬಳಲಿದರೆ ಆಗುವುದೆ? ಹಾಲು ಖೀರು ಸಿಕ್ಕಾಗ ಉಂಡು ಕಷ್ಟ (ಹುಯ್ಯಲು) ಬಂದಾಗ ಬೇಡವೆಂದರೆ ಆದೀತೆ? ಲಿಂಗದೇವಾ, ಇದು ನೀನು ಮಾಡುವ ಲೀಲೆ; ಕಾಟ ಬೇಡವೆಂದರೆ ಆಗುವುದೆ? ಸುಖ–ದುಃಖ ಎರಡನ್ನೂ ಸಮಚಿತ್ತದಿಂದ ಸ್ವೀಕರಿಸಬೇಕು.

***************** **ಮುಕ್ತಾಯ** *****************

[ಲಭ್ಯವಿರುವ ಧರ್ಮಪಿತ ಗುರುಬಸವಣ್ಣನವರ ವಚನಗಳಿಗೆ ವ್ಯಾಖ್ಯಾನ ಬರೆಯಲಾಗಿದೆ. ಈ ಸಂಚಿಕೆಗೆ ವ್ಯಾಖ್ಯಾನ ಪೂರ್ಣಗೊಂಡಿದೆ. ಜನವರಿ ಸಂಚಿಕೆಯಿಂದ ಜಗನ್ಮಾತೆ ಅಕ್ಕಮಹಾದೇವಿಯ ವಚನಗಳಿಗೆ ಬರೆಯಲಾಗುವುದು. – ಮಾತಾಜಿ]

ವಿ.ಸೂಚನೆ: 27ನೆಯ ಶರಣ ಮೇಳದಲ್ಲಿ ಬಸವ ವಚನಾಮೃತ ಭಾಗ–2 ಬಿಡುಗಡೆ ಮಾಡಲಾಗುವುದು. ಅದರಲ್ಲಿ 1009ರಿಂದ 1416ನೆಯ ವಚನದವರೆಗೆ ವ್ಯಾಖ್ಯಾನ ವಿರುವುದು.

ಸ್ವಯಂ ಸೇವಕರಿಗೆ ಕರೆ

- ಮಾತಾಜಿ

12ನೆಯ ಶತಮಾನದ ಮಹಾಮನೆಯಲ್ಲಿ ನಡೆದಂತಹ ದಾಸೋಹ ಸೇವೆಯನ್ನು ನೆನಪಿಸುವಂತೆ ಶರಣ ಮೇಳದ ದಾಸೋಹ ನಡೆಯಬೇಕು, ನಡೆಯುತ್ತಿದೆ. ಧರ್ಮಪಿತರ ಆದೇಶ ಹೀಗಿರುತ್ತದೆ.

ಭಕ್ತನು ಭಕ್ತನ ಮನೆಗೆ ಬಂದಡೆ, ಭೃತ್ಯಾಚಾರವ ಮಾಡಬೇಕು;
ಕರ್ತನಾಗಿ ಕಾಲ ತೊಳೆಯಿಸಿಕೊಂಡಡೆ, ಹಿಂದೆ ಮಾಡಿದ ಭಕ್ತಿಗೆ ಹಾನಿ!
ಲಕ್ಷಗಾವುದ ದಾರಿಯ ಹೋಗಿ, ಭಕ್ತನು ಭಕ್ತನ ಕಾಂಬುದು ಸದಾಚಾರ.
ಅಲ್ಲಿ ಕೂಡಿ ದಾಸೋಹವ ಮಾಡಿದೊಡೆ
ಕೂಡಿಕೊಂಬನು ನಮ್ಮ ಲಿಂಗದೇವನು. (ಬವ.ದೀ.248)

ಶರಣರು ಶರಣರನ್ನು ಭೇಟಿಯಾದಾಗ ಪರಸ್ಪರ ಉಪಚರಿಸಬೇಕು, ಸೇವೆ ಮಾಡಬೇಕು. ತಾನೇ ಶ್ರೇಷ್ಠ ಎಂಬ ಅಹಂಕಾರ ತಾಳಿ ಇನ್ನಿತರರು ಸೇವೆ ಮಾಡಲೆಂದು ನಿರೀಕ್ಷಿಸಬಾರದು. ಲಕ್ಷಗಾವುದ ದೂರವೇ ಇರಲಿ ಸಹ ಧರ್ಮೀಯ ಶರಣರನ್ನು ಕಾಣಲು ಹೋಗಬೇಕು. ಹಾಗೆ ಹೋದಾಗ ದಾಸೋಹಂ ಭಾವನೆಯಿಂದ ತನು ಸೇವೆ-ಮನ ಸೇವೆ-ಧನ ಸೇವೆ ಮಾಡಬೇಕು. ಅಂಥವರನ್ನು ಲಿಂಗದೇವ ಮೆಚ್ಚಿ ಒಲಿದು ಕೂಡುವನು. ಧರ್ಮಪಿತರ ಆದೇಶವನ್ನು ಪಾಲಿಸಲು ಇರುವ ಸೂಕ್ತ ಅವಕಾಶ ಶರಣ ಮೇಳ. ಅಲ್ಲಿ ದಾಸೋಹ ಮಾಡಲು ಅವಕಾಶ ಉಂಟು. ಒಬ್ಬೊಬ್ಬ ಶರಣ ಬಂಧುವನ್ನು ಭೇಟಿಯಾಗಲು ಬಹುದೂರ ಕ್ರಮಿಸಬೇಕಿಲ್ಲ. ಎಲ್ಲರೂ ಒಂದೇ ಕಡೆ ಸಿಗುತ್ತಾರೆ. ಜೊತೆಗೆ ಜ್ಞಾನ ದಾಸೋಹವೂ ಇರುತ್ತದೆ. ಆದ್ದರಿಂದ ಅಚ್ಚುಕಟ್ಟಾಗಿ ದಾಸೋಹವು ನಡೆಯಬೇಕಾದರೆ ಹೆಚ್ಚು ಜನ ಶರಣ ಬಂಧುಗಳು ಸ್ವಯಂ ಸೇವಕರಾಗಿ ದುಡಿಯಲು ಸಿದ್ಧರಾಗಬೇಕು. ಶರಣ ಮೇಳವೆಂಬ ತೌರಿನ ಹಬ್ಬಕ್ಕಾಗಿ ರಜೆಗಳನ್ನು, ಸಮಯವನ್ನು ಕಾಯ್ದಿರಿಸಿಕೊಳ್ಳಬೇಕು; ನೀಡಲು ಕಾಣಿಕೆಯನ್ನು ಹೊಂದಿಸಿ ಇಡಬೇಕು. ಶರಣ ಮೇಳ ಪೂರೈಸಿ ಹೋಗುತ್ತಲೇ ಹುಂಡಿಯೊಂದನ್ನು ಇಟ್ಟು ಕಾಣಿಕೆ ಸಂಗ್ರಹಿಸುತ್ತಲಿರ ಬೇಕು. ತಮ್ಮ ಇಷ್ಟಾರ್ಥಗಳು ಸಿದ್ಧಿಯಾದರೆ ಶರಣ ಮೇಳಕ್ಕೆ ಬಂದು ಸೇವಾ ಕಾರ್ಯಕ್ಕೆಗೊಳ್ಳುತ್ತೇವೆ ಎಂಬ ಹರಕೆಯನ್ನು ಮಾಡಿಕೊಳ್ಳಬೇಕು. ತನು ದಾಸೋಹಿಗಳು ಡಿಸೆಂಬರ್ 15ರಿಂದಲೇ ಬರಲು ಪ್ರಯತ್ನಿಸಬೇಕು. ಅತ್ಯಂತ ಹೆಚ್ಚಿನ ಜನರು ಕನಿಷ್ಠ ಜನವರಿ 1ರಿಂದಲಾದರೂ ಬಂದು ಸೇವಾ ಕಾರ್ಯದಲ್ಲಿ ತೊಡಗಬೇಕು. ಆರ್ಥಿಕ ವಾಗಿ ಅಶಕ್ತರಿದ್ದವರಿಗೆ ರಾಷ್ಟ್ರೀಯ ಬಸವ ದಳದವರು ಗಾಡಿ ಖರ್ಚು ಕೊಟ್ಟು ಕಳಿಸಿಕೊಡಬೇಕು. ಬುದ್ಧಿಜೀವಿಗಳಿಗೂ ಸಾಕಷ್ಟು ಕೆಲಸವಿರುತ್ತದೆ. ಶರಣೆಯರಿಗೂ ಸೇವಾ ಕಾರ್ಯ ಸಾಕಷ್ಟು ಇರುತ್ತದೆ. ಸಮಯವನ್ನು ಒದಗಿಸಿಕೊಂಡು ಬಂದು ಯಾರು ಬೇಕಾದರೂ ಸೇವೆ ಮಾಡಬಹುದು.

ಶರಣ ಮೇಳಕ್ಕೆ ಬಂದ ಶರಣರಿಗೆ ಮಾಡುವ ಉಪಚಾರ,
ಧರ್ಮಗುರು ಬಸವಣ್ಣನವರಿಗೆ ಮಾಡುವ ಉಪಚಾರ,
ಶರಣ ಮೇಳದ ವಿಸ್ತರಣೆಯಲ್ಲಿದೆ
ಬಸವ ಗುರುವಿನ ಕೀರ್ತಿ, ಲಿಂಗಾಯತ ಧರ್ಮದ ಮಹತಿ ।
ಎಂಬುದು ತಮ್ಮೆಲ್ಲರಲ್ಲಿ ಅಚ್ಚೊತ್ತಲಿ.

2014ನೇ ವರ್ಷದ ಶರಣರ ಜಯಂತಿ ಮತ್ತು ಹಬ್ಬಗಳು

ಕೂಡಲ ಸಂಗಮದಲ್ಲಿ ಶರಣಮೇಳ	ಜನವರಿ 11 ರಿಂದ 15
ಬಸವ ಧರ್ಮ ಸಂಸ್ಥಾಪನಾ ದಿನ-ಶರಣ ಸಮಾಗಮ	ಜನವರಿ 14
ಸಿದ್ಧರಾಮೇಶ್ವರ ಜಯಂತಿ★	ಜನವರಿ 15
ಗಣರಾಜ್ಯೋತ್ಸವ★	ಜನವರಿ 26
ಚನ್ನಹುಣ್ಣಿಮೆ (ಉಳಿವೆಯಲ್ಲಿ ರಥೋತ್ಸವ) ಗಣಭೋಜನ	ಫೆಬ್ರವರಿ 14
ಸರ್ವಶರಣರ ದಿನಾಚರಣೆ / ಮಹಾಶಿವರಾತ್ರಿ / ಗಣಮೇಳ	ಫೆಬ್ರವರಿ 27
ಪೂಜ್ಯ ಮಾತಾಜಿ ವರ್ಧಂತಿ	ಮಾರ್ಚ್ 13
ಅಲ್ಲಮಪ್ರಭು ಜಯಂತಿ (ಚಾಂದ್ರಮಾನ ಯುಗಾದಿ)★	ಮಾರ್ಚ್ 31
ಅಲ್ಲಮಪ್ರಭು ಗಿರಿಯಲ್ಲಿ ಲಿಂಗಾಯತ ಗಣಮೇಳ	ಮಾರ್ಚ್ 31,ಏಪ್ರಿಲ್01,02
ಅಕ್ಕಮಹಾದೇವಿ ಜಯಂತಿ	ಏಪ್ರಿಲ್ 15
ಹರಳಯ್ಯ ಜಯಂತಿ	ಏಪ್ರಿಲ್ 15
ಬಸವ ಜಯಂತಿ	ಮೇ 02
ಧಾರವಾಡದಲ್ಲಿ ಶರಣೋತ್ಸವ	ಮೇ 24, 25,26
ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಬಸವೋತ್ಸವ	ಜೂನ್22
ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ ಲಿಂಗೈಕ್ಯ ಸಂಸ್ಮರಣೆ	ಜೂನ್ 30
ಬಸವ (ಲಿಂಗೈಕ್ಯ ಸಂಸ್ಮರಣೆ) ಪಂಚಮಿ	ಆಗಸ್ಟ್ 01
ನೀಲಮ್ಮ (ಲಿಂಗೈಕ್ಯ ಸಂಸ್ಮರಣೆ) ಷಷ್ಠಿ	ಆಗಸ್ಟ್ 02
ಸ್ವಾತಂತ್ರ್ಯೋತ್ಸವ★	ಆಗಸ್ಟ್15
ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳ 82ನೆಯ ಜಯಂತಿ ★	ಆಗಸ್ಟ್29
(ಗಣೇಶ ಚೌತಿ) ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ★	ಆಗಸ್ಟ್29
ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ವರ್ಧಂತಿ	ಆಗಸ್ಟ್29
ಗಾಂಧಿ ಜಯಂತಿ★	ಅಕ್ಟೋಬರ್ 02
ಕಲ್ಯಾಣ ಕ್ರಾಂತಿ ಸಂಸ್ಮರಣೆ	ಅಕ್ಟೋಬರ್ 02,03
ಬಸವ ಕಲ್ಯಾಣದಲ್ಲಿ 13ನೆಯ ಕಲ್ಯಾಣಪರ್ವ	ಅಕ್ಟೋಬರ್18,19,20
ಬಸವ ಧರ್ಮದ ವಿಜಯೋತ್ಸವ ★	ಅಕ್ಟೋಬರ್ 20
ಕನ್ನಡ ರಾಜ್ಯೋತ್ಸವ★	ನವೆಂಬರ್ 01
ಚನ್ನಬಸವೇಶ್ವರ ಜಯಂತಿ★	ಅಕ್ಟೋಬರ್ 24
ಚನ್ನಬಸವೇಶ್ವರ ಲಿಂಗೈಕ್ಯ ದಿನಾಚರಣೆ	ನವೆಂಬರ್06

★ ಸರ್ಕಾರಿ ರಜಾದಿನ

||ಓಂ ಶ್ರೀ ಗುರು ಬಸವಲಿಂಗಾಯ ನಮಃ|| ||ಓಂ ಶ್ರೀ ಗುರು ಸಿದ್ಧರಾಮೇಶ್ವರಾಯ ನಃ

866666

ಚಿಕ್ಕಮಗಳೂರು ಜಿಲ್ಲೆಯ ಕಡೂರಿನಲ್ಲಿ
ಶ್ರೀ ಗುರು ಸಿದ್ಧರಾಮೇಶ್ವರರ 841ನೇ ಜಯಂತಿ ಉತ್ಸವ
2014ರ ಜನವರಿ 14 ಮತ್ತು 15ರಂದು







ಬಸವಯೋಗಿ ಶ್ರೀ ಸಿದ್ಧರಾಮೇಶ್ವರರು

ಜಯಂತಿ ಮಹೋತ್ಸವ ಸಮಿತಿ, ಕಡೂರು
ಶರಣ. ಜಿ. ಗುರುಪ್ರಸಾದ, ಅಧ್ಯಕ್ಷರು
ಶರಣ. ಕಾಮನಕೆರೆ ಶಶಿಧರ್, ಕಾರ್ಯಾಧ್ಯಕ್ಷರು
ಶರಣ. ಕೆ.ಜಿ. ಬಸವರಾಜು, ಪ್ರಧಾನ ಕಾರ್ಯದರ್ಶಿ

ನೊಳಂಬ ವೀರಶೈವ ಸಂಘ, ಬೆಂಗಳೂರು
ಶರಣ. ಕೆ.ಎನ್. ಚಂದ್ರಶೇಖರಯ್ಯ, ಅಧ್ಯಕ್ಷರು
ಶರಣ. ಬಿ. ಕೆ. ಚಂದ್ರಶೇಖರ್, ಗೌರವ ಕಾರ್ಯದರ್ಶಿ
ಶರಣ. ಕೆ. ಬಿ. ರುದ್ರಪ್ಪ, ಖಜಾಂಚಿ

ಸಮಿತಿಯ ಕಾರ್ಯಾಲಯ:
ಮರವಂಜಿ ಸರ್ಕಲ್, ಬಿ. ಹೆಚ್. ರಸ್ತೆ
ಕಡೂರು-577548, ಜಿ|| ಚಿಕ್ಕಮಗಳೂರು
ದೂರವಾಣಿ: 08567-214403

ಸರ್ವರಿಗೂ ಆದರದ ಸುಸ್ವಾಗತ
ಶರಣರ ಬರುವೆಮಗೆ ಪ್ರಾಣ ಜೀವಾಳ

ತಮ್ಮ ಶುಭಾಗಮನ ಬಯಸುವವರು, ಭುಜೇಂದ್ರ ಬಿಳ್ಳೇಕೆರೆ-98445 51414

Registerd NO/KA/BGW/50/2012-2014, RNI 19980/70, POSTED AT MBC BANGALORE GP(
ON 3rd,10th,20th, OF EVERY MONTH. LICENCED TO POST WITHOUT PRE PAYMENT
WPP-17, PAGES 32+4 (COVER PAGES)